"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1997ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಇದು ಸಹ ಒಂದು ತಿದ್ದುಪಡಿ ವಿಧೇಯಕ. ಇದರಲ್ಲಿ ಸೆಕ್ಷನ್ 94ನೇ ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್ 64ಕ್ಕೆ ತಿದ್ದುಪಡಿಯನ್ನು ನಾವು ಇವತ್ತು ತರುತ್ತಿದ್ದೇವೆ. ಇದು ಏನೆಂದರೆ ನಮ್ಮ ಸರ್ಕಾರಿ ಜಮೀನಿನಲ್ಲಿ ಬಡವರು ಬಗರ್ ಹುಕುಂನಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ, ಅವರಿಗೆ 1990ನೇ ಇಸವಿ ಒಳಗಡೆ ಫಾರಂ ನಂ 50ರಲ್ಲಿ ಅರ್ಜಿ ಹಾಕಿ ಅವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಳ್ಳಬೇಕೆಂದು ಕಾನೂನನ್ನು ತಂದಿತ್ತು. ಬಡವರು ಗೊತ್ತಿಲ್ಲದೆ ಫಾರಂ ನಂಬರ್ 50ನ್ನು ಹಾಕಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಬೇಕಾದಂತಹ ಪ್ರಯತ್ನ ಮಾಡುವುದಕ್ಕೆ ಆಗಲಿಲ್ಲ. ಆದರೂ ಅವರು ತಮ್ಮ ಎಂಜಾಯ್‌ಮೆಂಟ್‌ನಲ್ಲಿ ಆ ಸರ್ಕಾರಿ ಜಮೀನಿನಲ್ಲಿ ಇದ್ದಾರೆ. ಇಂತಹವರಿಗೆ ಮತ್ತೆ ಒಂದು ಅವಕಾಶ ಕೊಟ್ಟು ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಯಾರು ನಿಜವಾಗಲೂ ಅಂತಹ ಜಮೀನಿನಲ್ಲಿ ಇದ್ದಾರೆ, ಒಂದು ಯೂನಿಟ್‌ಗೆ ಒಳಗಡೆ ಇರತಕ್ಕಂಥವರಿಗೆ ಸರ್ಕಾರ ಅಧಿಕಾರವನ್ನು ಕೊಡುತ್ತಿದ್ದೇವೆ. ಇದು ನಮ್ಮ ಕರ್ನಾಟಕದಾದ್ಯಂತ ಬಹಳ ಕೇಸುಗಳು ನಮ್ಮ ಸರ್ಕಾರದ ಗಮನಕ್ಕೆ ಬಂತು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಅವರು ಇಲ್ಲಿ ಕೊಟ್ಟಿರುವಂತಹ ಉದ್ದೇಶವೇ ಬೇರೆ, ಅವರು ನೀಡುತ್ತಿರುವಂತಹ ವಿವರಣೆಯೆ ಬೇರೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲ, ಸರಿಯಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಮೂರು ಕಾಪಿಗಳನ್ನು ಕೇಳಿದರೆ ಒಂದನ್ನು ಸರ್ಕ್ಯೂಲೇಟ್ ಮಾಡುತ್ತಿಲ್ಲ. ನಾವು ಇಲ್ಲಿ ಕುಳಿತುಕೊಂಡು ಏನನ್ನು ಓದಬೇಕು. ಅದನ್ನು ನಮಗೆ ಕಳುಹಿಸುವುದಕ್ಕೆ ಹೇಳಿ.

ಶ್ರೀ ಬಿ. ಸೋಮಶೇಖರ್ : ಅವರು ಈ ಫಾರಂ ನಂ. 50 ಅನ್ನು ಹಾಕಿ ಅವರ ಹೆಸರಿಗೆ ಖಾತೆಯನ್ನು ಮಾಡಿಕೊಳ್ಳಲು ದಿ:19-9-1991ರವರೆಗೆ ಟೈಮ್ ಇತ್ತು. ಈ ರೀತಿಯ ಅವಕಾಶವಿದ್ದರೂ ಸಹ ಅವರು ಈ ಫಾರಂ ನಂ. 50ಅನ್ನು ಹಾಕಿ ಅವರ ಹೆಸರಿಗೆ ಖಾತೆಯನ್ನು ಮಾಡಿಕೊಳ್ಳುವುದಕ್ಕೆ ಆಗಲಿಲ್ಲ? ಅಂಥವರಿಗೆ ಮತ್ತೆ ಈ ಅವಕಾಶವನ್ನು ಮಾಡಿಕೊಡುವಂಥಾದ್ದು ಆಗಿದೆ. ಅದರಲ್ಲಿ ಗೇಣಿದಾರರಿಗೆ ಅವಕಾಶ ಮಾಡಿಕೊಡುವಂತೆ ಆಯಿತು. ಇದರಲ್ಲಿ ಬಡವರು ಸರ್ಕಾರಿ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿಯನ್ನು ಯಾರು ಮಾಡಿಕೊಂಡು ಬಂದಿದ್ದಾರೆ. ಅವರು ಅವರ ಹೆಸರಿಗೆ ಖಾತೆಯನ್ನು ಮಾಡಿಕೊಳ್ಳಲು ಸಾಧ್ಯವಾಗಿಲ್ಲ, ಹೀಗಾಗಿ ಅವರು ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅವರು ಆ ಜಮೀನಿನಲ್ಲಿ ಬೋರವೆಲ್ ಅನ್ನು ಹಾಕಿಕೊಳ್ಳುವುದಕ್ಕಾಗಲೀ ಅಥವಾ ಒಂದು ಪಂಪ್‌ಸೆಟ್ ಅನ್ನು ಹಾಕಿಕೊಳ್ಳಲು ಸಹ ಆಗುತ್ತಿಲ್ಲ. ಆದುದರಿಂದ ಫಾರಂ ನಂ. 50ರಲ್ಲಿ ತಮ್ಮ ಹೆಸರಿಗೆ ಖಾತೆಯನ್ನು ಮಾಡಿಕೊಳ್ಳಲು ಆಗಲಿಲ್ಲವೋ ಅಂಥವರಿಗೆ ಅವಕಾಶವನ್ನು ಮಾಡಿಕೊಡುತ್ತಿದ್ದೇವೆ. ಇಲ್ಲಿ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಒಂದು ವರ್ಷದೊಳಗಾಗಿ ಅವರ ಹೆಸರುಗಳಿಗೆ ಖಾತೆಗಳನ್ನು ಮಾಡಿಕೊಳ್ಳುವಂಥಾದ್ದಕ್ಕೆ ಈ ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ. ಇದು ಬಡವರಿಗೆ ಅನುಕೂಲ ಮಾಡುವಂತಹದ್ದಾಗಿದೆ. ಇದು ಬಹಳ ವರ್ಷಗಳಿಂದ ಇದ್ದಂತಹ ಬೇಡಿಕೆಯಾದ್ದರಿಂದ ಇದನ್ನು ಈಗ ತಂದಿದ್ದೇವೆ. ಆದುದರಿಂದ ಮಾನ್ಯ ಸದಸ್ಯರುಗಳು ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ಕಮಿಟಿಗೆ ಕೊಡಿ, ಜಿಲ್ಲಾಧಿಕಾರಿಗಳು ಸ್ಪಾಟ್‌ಗೆ ಹೋಗುವುದೆಂದರೆ ಯಾವ ಆಧಾರದ ಮೇಲೆ ಹೋಗುತ್ತಾರೆ? ಅವರಿಗೆ ಏನು ಆಧಾರವಿದೆ? ಅವರು ಕನಸು ಕಾಣುತ್ತಾರೆ ಏನು?

ಶ್ರೀ ಬಿ. ಸೋಮಶೇಖರ್ : ಯಾರು ಫಾರಂ ನಂ.50ನ್ನು ಹಾಕಿದ್ದಾರೆ. ಅದನ್ನು ಪರಿಗಣಿಸುವಂತಹ ಅಧಿಕಾರ ಕಮಿಟಿಯವರಿಗೆ ಇದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಮಸೂದೆಯನ್ನು ಮಂಡಿಸಿದ್ದಾರೆ, ಮತ್ತು ಅದರ ಉದ್ದೇಶವನ್ನು ವಿವರಿಸಿದ್ದಾರೆ, ಮಾನ್ಯ ಮಾಧುಸ್ವಾಮಿಯವರಿಗೆ ನಿಮ್ಮ ಸಲಹೆ ಏನಾದರೂ ಇದ್ದರೆ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಪ್ರತಿ ಸಲ ಜಿಲ್ಲಾಧಿಕಾರಿಗಳು ವಿತ್ ಜೆಟ್ ಅಪ್ಲಿಕೇಶನ್ ಹೋಗುತ್ತಾರೆಂದು ಹೇಳುತ್ತಿದ್ದಾರೆ, How can the Deputy Commissioner know? How can he be aware of? ಅದು ಜಿಲ್ಲಾಧಿಕಾರಿಗಳ ಗಮನಕ್ಕೆ ಬರುವುದಾದರೂ ಹೇಗೆ?

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಒಬ್ಬೊಬ್ಬರು ಹೇಳುವ ವೇಳೆಗೆ ಉಚ್ಚಾರಣೆಯು ಒಂದೊಂದು ರೀತಿಯಲ್ಲಿರುತ್ತದೆ. ನೀವು ಅದರ ಮೂಲ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರ ನಿಗದಿ ಮಾಡಿದಂತಹ ದಿನಾಂಕದೊಳಗೆ ಯಾರು ಅರ್ಜಿಯನ್ನು ಕೊಟ್ಟಿಲ್ಲ, ಅವರು ಇವತ್ತಿನವರೆಗೂ ಸರ್ಕಾರದ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡಿದ್ದಾರೆ. ಅಂಥವರಿಗೆ ಈ ಅವಕಾಶದ ಮುಖಾಂತರ ಅರ್ಜಿಯನ್ನು ಸಲ್ಲಿಸುತ್ತಾರೆ. ಅಂತಹ ಅರ್ಜಿಗಳನ್ನು ವಿಚಾರಣೆ ಮಾಡುವುದಕ್ಕೆ ಜಿಲ್ಲಾಧಿಕಾರಿಗಳು ಬರುತ್ತಾರೆಂದು ಮಾನ್ಯ ಮಂತ್ರಿಯವರು ಹೇಳಿದ್ದುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ, ಜಿಲ್ಲಾಧಿಕಾರಿಯವರ ಗಮನಕ್ಕೆ ಬಂದಿದ್ದು ಎಂದು ಹೇಳುತ್ತಿರುವಂಥಾದ್ದು.

(ಗೊಂದಲ)

ಅಧ್ಯಕ್ಷರು : ನೀವು ಅರ್ಥಮಾಡಿಕೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಸ್ಟೇಟ್‌ಮೆಂಟ್ ಮಾಡಿಬಿಟ್ಟರೆ ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ? He says he is making a statement in the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಾಧುಸ್ವಾಮಿಯವರೆ, ನಾನು ಹೇಳುವಂಥಾದ್ದು ಕೇಳಿ, ಇದು ಸರಿಹೋಗಬಹುದು. ಈ ತಿದ್ದುಪಡಿಯನ್ನು 1994ರಲ್ಲಿ ತಂದಂಥಾದ್ದು, ನಾನು ಇದನ್ನು ಸ್ವಾಗತ ಮಾಡುತ್ತೇನೆ. ಇದಕ್ಕೆ ಕಾರಣ ಹಿಂದೆ ನಾವೇ ಇದನ್ನು ದಿನಾಂಕ : 14-4-1990ಕ್ಕೂ ಹಿಂದೆ ಅಂದರೆ ಆ ದಿವಸದ ಹಿಂದೆ ಯಾರು ಈ ಜಮೀನನ್ನು ಅನ್-ಅಥರೈಜ್ ಆಗಿ ಕಲ್ಟಿವೇಟ್ ಮಾಡಿದ್ದರು. ಅವರಿಗೆ ಇದನ್ನು ರೆಗ್ಯುಲರೈಜ್ ಮಾಡಬೇಕೆಂದು ಕಾನೂನು ತಂದೆವು. ನಾವು ಈ ದಿನಾಂಕವನ್ನೇ ಏಕೆ ತೆಗೆದುಕೊಂಡೆವೆಂದರೆ ಇದು ಬಹಳ ಮಹತ್ವದ ದಿನವಾಗಿದೆ. ಈ 14ನೇ ಏಪ್ರಿಲ್ ದಿವಸದಂದು ಡಾ॥ ಅಂಬೇಡ್ಕರ್‌ರವರು ಹುಟ್ಟಿದ ದಿವಸ ಆಗಿದೆ. ಆದುದರಿಂದ ನಾವು ಈ ದಿವಸವನ್ನೇ ನಿಗದಿ ಮಾಡಬೇಕೆಂಬ ದೃಷ್ಟಿಯಿಂದ ಈ ದಿವಸವನ್ನು ತೆಗೆದುಕೊಂಡೆವು. ಈ ಹಿಂದೆ ಯಾರು ಸಾಗುವಳಿ ಮಾಡಿದ್ದಾರೆ, ಅಂಥವರ ಅರ್ಜಿಗಳನ್ನು ತೆಗೆದುಕೊಂಡು ಅದನ್ನು ರೆಗ್ಯುಲರೈಜ್ ಮಾಡಬೇಕೆಂದು ಕಾನೂನು ತಂದಿದ್ದು. ಆದರೆ ಕೆಲವು ಜನರು ಲ್ಯಾಂಡ್‌ಲೆಸ್ ಲೇಬರರ್ಸ್, ಅಗ್ರಿಕಲ್ಚರಿಸ್ಟ್‌ಗಳಿದ್ದಾರೆ, ಅಂಥವರು ಬಹುಸಂಖ್ಯಾತರು ಇದ್ದಾರೆ. ಇಲ್ಲಿ ಕಾರಣಾಂತರದಿಂದ ಕೆಲವರು ಅರ್ಜಿಯನ್ನು ಹಾಕಿಲ್ಲ. ಈ ಅರ್ಜಿಯನ್ನು ಹಾಕದೇ ಇರುವಂತಹ ಇನ್ನು ಲಕ್ಷಾಂತರ ಜನರು ಇದ್ದಾರೆಂದು ಸರ್ಕಾರದ ಗಮನಕ್ಕೆ

ಬಂದಮೇಲೆ ಇದಕ್ಕೆ ಪುನಃ ಸರ್ಕಾರ ಎಕ್ಸ್‌ಟೆನ್‌ಷನ್ ಕೊಡುತ್ತಿದ್ದಾರೆ. ಈ ರೀತಿ ಅವಧಿಯನ್ನು ಕೊಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ಹೊಸದಾಗಿ ಕೆಲವು ಜನರು ಅಪ್ಲಿಕೇಶನ್‌ಗಳನ್ನು ಸೃಷ್ಟಿ ಮಾಡಿ ಇರುವ ಜಾಗದ ಮೇಲೆ ಜಗಳವಾಗುವಂಥಾದ್ದು ಆಗಬಾರದು. ಇಲ್ಲಿ ಸ್ಪೆಷಲ್ ಆಗಿ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅವರಿಗೆ ಗ್ರಾಂಟ್ ಮಾಡಬೇಕೆಂದು ಇದೆ. ಈ ಕೆಲಸ ಅವರ ಒಬ್ಬರ ಕೈಯಲ್ಲಿ ಆಗುವುದಿಲ್ಲ. ಈಗ ಉದಾಹರಣೆಗೆ ಇಂತಹ ಕೇಸ್‌ಗಳು ಕೋಲಾರ, ಬೆಂಗಳೂರು ರೂರಲ್, ಚಿತ್ರದುರ್ಗ, ತುಮಕೂರು ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಈ ರೀತಿಯಾಗಿದೆ. ಇಲ್ಲಿ ಹೆಚ್ಚು ಅಪ್ಲಿಕೇಶನ್‌ಗಳು ಇವೆ, ಇವತ್ತಿಗೂ ಕೆಲವು ಜನರು ಅಪ್ಲಿಕೇಷನ್ ಹಾಕಿಲ್ಲ. ಅವರು ಅರ್ಜಿಗಳನ್ನು ಹಾಕಿಲ್ಲವೆನ್ನುವಂತಹ ನೆಪದಲ್ಲಿ ಬೇರೆಯವರು ಬರಬಾರದೆಂದು ಮತ್ತೆ ಇದನ್ನು ಜಿಲ್ಲಾಧಿಕಾರಿಗಳೇ ನೇರವಾಗಿ ಎನ್‌ಕ್ವೈರಿ ಮಾಡಿ ಕೊಡಬೇಕೆನ್ನುವ ದೃಷ್ಟಿಯಿಂದ ಒಬ್ಬ ಜವಾಬ್ದಾರಿ ಅಧಿಕಾರಿಗೆ ಇದನ್ನು ವಹಿಸಬೇಕೆಂಬ ದೃಷ್ಟಿಯಿಂದ ಇದನ್ನು ಇವತ್ತು ಡಿ.ಸಿ.ಯವರಿಗೆ ಕೊಟ್ಟಿದ್ದಾರೆ. ಆದರೆ ಈ ಕೆಲಸ ಅವರ ಒಬ್ಬರ ಕೈಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಆಗುವುದಿಲ್ಲ. ಇದಕ್ಕೆ ಹಿಂದೆ 1980ರಲ್ಲಿ ಈ ಕಾನೂನಿಗೆ ತಿದ್ದುಪಡಿ ಇರಲಿಲ್ಲ. ಆಗ ಗೌವರ್ನಮೆಂಟ್ ಒಂದು ಆರ್ಡರ್ ಇಷ್ಯೂ ಮಾಡಿ 1979ಕ್ಕೂ ಹಿಂದೆ ಯಾರು ಜಮೀನನ್ನು ಅನ್ ಅಥರೈಜ್ಡ್ ಆಗಿ ಕಲ್ಟಿವೇಟ್ ಮಾಡಿದ್ದಾರೆ ಅವರಿಗೆ ಇದನ್ನು ರೆಗ್ಯುಲರೈಜ್ ಮಾಡಬೇಕೆಂದು, ಅದನ್ನು ಮಾಡಿಕೊಡುವಂತಹ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರು ಸ್ಥಳ ಪರಿಶೀಲನೆ ಮಾಡಬೇಕೆಂದು ಸರ್ಕಾರಿ ಆಜ್ಞೆಯಾಯಿತು. ಈ ರೀತಿಯಾಗಿ ಜಿ.ಓ. ಕಾನೂನು ಪ್ರಕಾರವಿಲ್ಲ, ಅದಕ್ಕೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಇಲ್ಲವೆಂದು ಮುಂದೆ ಇದು ನಮ್ಮ ಗಮನಕ್ಕೆ ಬಂದರೂ ಕೂಡ ಅದು ಅದೇ ನೆಪದಲ್ಲಿ ನಡೆಯಲಿ ಎಂದುಕೊಂಡೆವು. ಕೆಲವು ಸಲ ಕಾನೂನು ಸಹಾಯ ಮಾಡಬಹುದು, ಕೆಲವು ಸಲ ಸಹಾಯ ಮಾಡುವುದಿಲ್ಲ. ಇವತ್ತು ಬಹಳ ಜನರು ಮಾಡುವಂಥವರು ಆ ಕಾಲದಲ್ಲಿ ಇದ್ದರು, ಈ ಕಾಲದಲ್ಲಿ ಕಡಿಮೆಯಾಗಿರಬಹುದು. ಕೆಲವು ಜನರು ಇದನ್ನು ನೋಡಿಕೊಂಡು ನಾವು ಏಕೆ ಇದನ್ನು ವಿರೋಧ ಮಾಡುವುದೆಂದು ಹೇಳುವಂಥಾದ್ದು ಇದೆ. ಇದಕ್ಕೆ ಅನಂತರ 1992ರಲ್ಲಿ ಒಂದು ಪರಿಹಾರ ಸಿಕ್ಕಿ ಕೊನೆಗೆ ಒಂದು ಅಮೆಂಡ್‌ಮೆಂಟ್ ತರುವುದಕ್ಕೆ ಸಾಧ್ಯವಾಯಿತು. ನಾವು ಹಿಂದೆ ಇದನ್ನು ಜಿ.ಓ. ತಂದು ಮಾಡಿದ್ದು, ಆಗ ಅಸಿಸ್ಟೆಂಟ್ ಕಮೀಷನರ್ ಎನ್‌ಕ್ವೈರಿ ಮಾಡಿದರು. ಇದರಲ್ಲಿ ನನ್ನ ಮನವಿ ಏನೆಂದರೆ ಈ ಕೇಸ್‌ಗಳು ಕ್ವಿಕ್ ಆಗಿ ಡಿಸ್‌ಪೋಸ್ ಆಗಬೇಕೆಂದರೆ ತಾವು ಅಸಿಸ್ಟೆಂಟ್ ಕಮಿಷನರುಗಳಿಗೆ ಈ ಜ್ಯೂರಿಸ್‌ಡಿಕ್‌ಶನ್ ಮೇಲೆ ಕೊಟ್ಟರೆ ಸಾಕಷ್ಟು ಕೇಸುಗಳು ಒಂದು ಟೈಮ್ ಬೌಂಡ್ ಪ್ರೋಗ್ರಾಂನಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು : ನಾನು ತಮಗೆ ಏನು ಹೇಳುತ್ತೇನೆಂದರೆ ಅವರು ಕೆಲವು ಕಡೆ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ನೋಡುತ್ತಿದ್ದಾರೆ, ಮತ್ತೆ ಲ್ಯಾಂಡ್ ಗ್ರಾಂಟ್ ಕಮಿಟಿ ಎಂದು ಏನು ಮಾಡಿದ್ದೇವೆ, ಆ ಕಮಿಟಿಗೆ ಅವರೇ ಚೇರ್ಮನ್ ಆಗಿರುತ್ತಾರೆ. ಪಿಟೀಷನ್ ಕೇಸ್‌ಗಳನ್ನು ಅವೇ ನೋಡುತ್ತಾರೆ ಮತ್ತೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಅವರೇ ಆಗಿರುತ್ತಾರೆ. ಅವರಿಗೆ ಅನೇಕ ಜವಾಬ್ದಾರಿಗಳು ಇರುತ್ತವೆ, ಅವರ ಕೈಯಲ್ಲಿ ಇದು ಆಗುವುದಿಲ್ಲ.

SRI M. MALLIKARJUNA KHARGE : Not only that. You can appoint anyother officer equivalent to him. I do agree for that. ಏಕೆಂದರೆ ಲ್ಯಾಂಡ್ ಇನ್‌ವಾಲ್ಸ್ ಮೆಂಟನ್ನು ಡಿ.ಸಿ. ಯವರಿಗೇ ಕೊಡುತ್ತಾರೆ.

ಅಧ್ಯಕ್ಷರು : ಸ್ಪೆಷಲಿಸ್ಟ್ ಅನ್ನು ಅಪಾಯಿಂಟ್ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಅಡಿಷನಲ್ ಟ್ರಿಬ್ಯುನಲ್ ಮಾಡಿದಾಗ Equivalent to his cadre any man can be appointed. ಇದಕ್ಕೆ ಯಾವುದೇ ಅಧಿಕಾರಿಗಳನ್ನು ಹಾಕುವಂತಹ ಸಂದರ್ಭದಲ್ಲಿ ಅವನ್ನು ನೋಡಿ ಅಪಾಯಿಂಟ್ ಮಾಡಬೇಕಾಗುತ್ತದೆ. ನೀವು ಆ ರೀತಿ ಮಾಡದೇ ಹೋದರೆ ಬಿಡಿಸಿ ಬಿಡಿಸಿ ಎಲ್ಲವನ್ನೂ ಬೇರೆಯವರಿಗೆ ಕೊಡುವ ಹಾಗೆ ಆಗುತ್ತದೆ. ಅದರಲ್ಲಿ ವಿಶೇಷವೇನೆಂದರೆ ಎಲ್ಲಿ ಕಾಂಪ್ಲಿಕೇಟೆಡ್ ಕೇಸ್ ಇದೆ ಎಂದರೆ ಶೆಡ್ಯೂಲ್ ಟೇಬಲ್ ಪೇಜ್ 7ರಲ್ಲಿ ಏನಿದೆ ಎಂದರೆ Bangalore City under the Karnataka Municipal Corporations Act, 1976 : 18 Kms., distance: The cities of Belgaum, Gulbarga, Hubli-Dharwad, Mangalore and Mysore respectively under the provisions of Karnataka Municipal Corporations Act, 1976 : 10 kms; All city Municipalities having more than fifty thousand population and constituted under the Karnataka Municipalities Act, 1964: -5 kms. ಆಗ ಇದನ್ನು ಏಕೆ ಲಿಮಿಟ್ ಮಾಡಲಾಯಿತೆಂದರೆ ಅನೇಕ ಜನರು ಅನ್ ಅಥರೈಜ್ಡ್ ಕಲ್ಪಿವೇಷನ್ ಹೆಸರಿನಲ್ಲಿ ಸಿಟಿಯಲ್ಲಿರುವಂತಹ ಲ್ಯಾಂಡ್ ಅನ್ನು ಕಬಳಿಸುವುದಕ್ಕೆ ಶುರುಮಾಡಿದರು. ಅದಕ್ಕೆ ನಾವು ಲಿಮಿಟೇಷನ್ ಮಾಡಿದೆವು. Beyond 18 kms. of Bangalore City. or beyond 10 kms., of other cities and 5 kms., in case of population more than fifty thousand. ಎಂದು ಮಾಡಲಾಯಿತು. ಕೆಲವು ಜನರು 18 ಕಿ.ಮೀ. ಒಳಗಡೆ ಇರುವಂತಹ ಜಮೀನನ್ನು ಕೂಡ ನೀವು ರೆಗ್ಯುಲರೈಜ್ ಮಾಡಬೇಕು. ಅದಕ್ಕಾಗಿ ನೀವು ಏನು ಮಾಡಬೇಕೆಂದರೆ ಸ್ಪೆಷಲ್ ಆಗಿ ಗ್ರಾಂಟ್ ಮಾಡಬೇಕೇ ಹೊರತಾಗಿ ನೇರವಾಗಿ ಇದೇ ಕಾನೂನಿನ ಕೆಳಗೆ ರೆಗ್ಯುಲರೈಜ್ ಮಾಡುವುದಕ್ಕೆ ಹೋದರೆ ಯಾರ್ಯಾರದೋ ಅಪ್ಲಿಕೇಶನ್ ಅನ್ನು ತೆಗೆದುಕೊಂಡು ಅಸಿಸ್ಟೆಂಟ್ ಕಮೀಷನರ್ ಆಗಲಿ, ಸ್ಪೆಷಲ್ ಡಿ.ಸಿ. ಯವರಾಗಲಿ ರೆಗ್ಯುಲರೈಜ್ ಮಾಡಿಬಿಡುತ್ತಾರೆ.

12.50 ಪಿ.ಎಂ

ಅದಕ್ಕೆ ನೀವು ಬೇರೆ ರೀತಿಯಲ್ಲಿ ನೋಡಿ. ಈಗ 94 (ಬಿ)ಗೆ ಏನು ತಿದ್ದುಪಡಿ ತಂದಿದ್ದೀರಿ, ಇದಕ್ಕೆ ಸೀಮಿತವಾಗಿ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಆಗಲೀ ಅಥವಾ ತತ್ಸಮಾನ ಅಧಿಕಾರಿಗಳನ್ನು ಪ್ರತಿ ಡಿವಿಷನ್‌ಗೆ ಒಬ್ಬ ಆಫೀಸರ್ ಫಿಕ್ಸ್ ಮಾಡಿ ಅವರಿಗೆ ಒಂದು ಟಾರ್ಗೆಟ್ ಕೊಡಿ. ಆರು ತಿಂಗಳೊಳಗಾಗಿ ಇಂತಿಷ್ಟು ಕೇಸ್‌ಗಳನ್ನು ಡಿಸ್ಪೋಸ್ ಮಾಡಬೇಕೆಂದು ಅವರಿಗೆ ಟಾರ್ಗೆಟ್ ಕೊಡಿ. ಆ ರೀತಿ ನೀವು ಟಾರ್ಗೆಟ್ ಫಿಕ್ಸ್ ಮಾಡಿದರೆ ಮಾತ್ರ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಅವರು ಡಿಸ್ಪೋಸಲ್ ಮಾಡದೇ ಒಂದಿಲ್ಲೊಂದು ಕಾರಣ ಅಥವಾ ನೆಪ ಹೇಳಿ ಅದನ್ನು ಮುಂದಕ್ಕೆ

ಹಾಕುತ್ತಿರುತ್ತಾರೆ. ಅದಕ್ಕಾಗಿ ದಯವಿಟ್ಟು ಇದಕ್ಕೊಂದು ಟೈಮ್ ಬೌಂಡ್ ಪ್ರೋಗ್ರಾಮ್ ಹಾಕಿಕೊಳ್ಳಿ. ಪುಟ 7ರಲ್ಲಿ ಇರತಕ್ಕ ಕೋಷ್ಟಕದಲ್ಲಿನ ಮೂರು ಕ್ಯಾಟಗರಿಗಳಲ್ಲಿ ಬೇನಾಮಿ ಅಪ್ಲಿಕೇಷನ್ಸ್ ಬಂದು ಯಾರಾದರೂ ಲ್ಯಾಂಡ್ ಅನ್ನು ತೆಗೆದುಕೊಂಡು ಪುನಃ ಇದನ್ನು ಎಸ್ಟೇಟ್ ಏಜೆನ್ಸಿಗಳಿಗೆ ಕೊಟ್ಟು ಅಲ್ಲಿ ಫ್ರಾಡ್‌ಗಳು ಮಾಡಿಕೊಳ್ಳತಕ್ಕಂಥದ್ದು ಆಗಬಾರದು. ಸರ್ಕಾರಿ ಭೂಮಿಯನ್ನು ಬಹಳಷ್ಟು ಜನ ರೆಗ್ಯುಲರೈಸ್ ಮಾಡಿಸಿಕೊಂಡು, ಅನಂತರ ಬೇರೆಯವರಿಗೆ ಮಾರತಕ್ಕ ಸನ್ನಿವೇಶಗಳಿವೆ. ಅದರಲ್ಲೂ ವಿಶೇಷವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ರೀತಿ ನಡೆದಿದೆ. ಆ ಬಗ್ಗೆಯೂ ಕೂಡ ನೀವು ನೋಡಬೇಕಾಗುತ್ತದೆ. ಬಹುಶಃ ಇದಕ್ಕೂ ಕಾಫಿ ಪ್ಲಾಂಟೇಷನ್ ರೆಗ್ಯುಲೇಷನ್ ಮಾಡುವುದಕ್ಕೂ ಸಂಬಂಧವಿಲ್ಲ. ಅದಕ್ಕಾಗಿ ಏನಾದರೂ ತರಾತುರಿಯಲ್ಲಿ ಮತ್ತೆ ಇನ್ನೊಂದು ಅಮೆಂಡ್‌ಮೆಂಟ್ ತಂದು, ಮಾನ್ಯ ನಾಣಯ್ಯನವರು ಮೊನ್ನೆ ಅನೌನ್ಸ್ ಮಾಡಿದ್ದಾರೆ, ಅದನ್ನು ತಲೆಯಲ್ಲಿಟ್ಟುಕೊಂಡು, ಮತ್ತೆ ಇನ್ನೊಂದು ಅಮೆಂಡ್‌ಮೆಂಟ್ ತಂದು ಅದೊಂದು ತೊಂದರೆ ಮಾಡಬೇಡಿ. ತಾವು ಇದನ್ನು ಸೀರಿಯಸ್ಸಾಗಿ ತೆಗೆದುಕೊಂಡಿ ಮಾಡಿ. ಮಾನ್ಯ ನಾಣಯ್ಯನವರ ವಿಚಾರ ಬೇರೆ ರೀತಿಯಲ್ಲಿ ತೆಗೆದುಕೊಳ್ಳಿ. ಅದಕ್ಕೂ ಇದಕ್ಕೂ ಸಂಬಂಧ ತರಬೇಡಿ ಎಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ|| ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, ಗೊತ್ತಿಲ್ಲದೆಯೇ ಅನೇಕ ಜನ ಇಲ್ಲಿ ಅರ್ಜಿ ಹಾಕದೇ ಇರತಕ್ಕಂಥವರಿದ್ದಾರೆ, ಅವರು ಅರ್ಜಿ ಹಾಕುವುದಕ್ಕೆ ಅವಕಾಶ ಮಾಡಿಕೊಡುವುದರ ಜೊತೆಗೆ, ಈ ಸಂಬಂಧಲ್ಲಿ ಡಿ.ಸಿ. ಯವರಿಗಾಗಲಿ ಅಥವಾ ಇನ್ನೊಬ್ಬರಿಗಾಗಲಿ ಅವಕಾಶ ಕೊಡದೇ, ಈ ಸಮಿತಿಗೆ ಏಕೆ ನೀವು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬಾರದು? ಈಗ ಸಮಿತಿಯಲ್ಲಿ ನಾವು ಈಗ ಆ ಕೆಲಸವನ್ನು ಮಾಡುತ್ತಿದ್ದೇವೆ. ನಾವು ಯಾವುದನ್ನು ಬಿಟ್ಟಿಲ್ಲ. ನಾವು ಪ್ರತಿ ವಾರ ಕೇಸಗಳನ್ನು ತೆಗೆದುಕೊಂಡು ಅದನ್ನು ಇತ್ಯರ್ಥ ಮಾಡುತ್ತಿದ್ದೇವೆ. ಆದ್ದರಿಂದ ಡಿ.ಸಿ.ಗೆ ಬದಲಾಗಿ ಈ ಸಮಿತಿಗೆ ಅಧಿಕಾರ ಕೊಡಬೇಕೆಂದು ಒತ್ತಾಯಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತಂದಿರತಕ್ಕ ವಿಧೇಯಕವನ್ನು ಸ್ವಾಗತ ಮಾಡುತ್ತಾ, ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಹೇಳಿದಂತಹ ಮಾತನ್ನು ನಾನು ಅನುಮೋದನೆ ಮಾಡುತ್ತಿದ್ದೇನೆ. ಈಗಾಗಲೇ ಡಿ.ಸಿ.ಯವರು ಅಥವಾ ಎ.ಸಿ.ಯವರು ಅಧಿಕ ಕೆಲಸದ ಒತ್ತಡದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇದನ್ನು ಸಮಿತಿಗೆ ಕೊಟ್ಟರೆ ಅದು ನ್ಯಾಯಬದ್ಧವಾಗಿ ಅದನ್ನು ತೀರ್ಮಾನ ಮಾಡುತ್ತದೆ. ನಾವು ಇಲ್ಲಿ ತಿಳಿದುಕೊಳ್ಳಬೇಕಾದ ಇನ್ನೊಂದು ವಿಚಾರ ಏನೆಂದರೆ, ಜನ ಸಾಮಾನ್ಯ ನೇರವಾಗಿ ಅಧಿಕಾರಿಯನ್ನು ಸಂಪರ್ಕಿಸಲು ಬಹಳಷ್ಟು ಭಯ ಹಾಗೂ ಸಂಕೋಚ ಪಡುತ್ತಾನೆ. ಇದನ್ನು ಸಮಿತಿಗೆ ನೀಡಿದರೆ ಅವನು ನಿಜಕ್ಕೂ ನಿರ್ಭಯನಾಗಿ ಈ ಸಮಿತಿ ಮುಂದೆ ಅರ್ಜಿ ಸಲ್ಲಿಸುವಂತಾಗುತ್ತದೆ. ಆದುದರಿಂದ, ದಯವಿಟ್ಟು ಈ ಸಮಿತಿಗೆ ಅಧಿಕಾರ ಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ನಾರಾಯಣ್ : ಮಾನ್ಯ ಅಧ್ಯಕ್ಷರೇ, ಬಹಳ ದಿವಸಗಳಿಂದ ಈ ಒಂದು ಬೇಡಿಕೆ ಇತ್ತು. ನಾವು ಅನೇಕ ರೂಪದಲ್ಲಿ ಇದರ ಬಗ್ಗೆ ಇಲ್ಲಿ ಪ್ರಸ್ತಾಪವನ್ನು ಮಾಡುತ್ತಿದ್ದೆವು. ಮಾನ್ಯ ಖರ್ಗೆಯವರೂ ಸಹಾ ಒಮ್ಮೆ ಕಂದಾಯ ಸಚಿವರಾಗಿದ್ದರು. ಅರ್ಜಿ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟರೆ ಈ ವಿಷಯದಲ್ಲಿ ಫ್ಲಡ್‌ಗೇಟ್ ಓಪನ್ ಆಗುತ್ತದೆ ಎನ್ನತಕ್ಕಂಥ ಕಾರಣದಿಂದ ಬಹಳ ವರ್ಷಗಳ ಕಾಲ ನಾವು ಇದನ್ನು ತಳ್ಳಿಕೊಂಡೇ ಬಂದೆವು. ಅಂತಿಮವಾಗಿ ಇದನ್ನು ತಂದಿರುವ ಈ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ, ನನ್ನ ವೈಯಕ್ತಿಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಬಗ್ಗೆ ನಾವು ಹೋರಾಟ ಮಾಡಿದ್ದೆವು. ನಾನೂ ಸಹ ಸ್ಥಳೀಯವಾಗಿ ಬಗರ್ ಹುಕುಂ ಸಮಿತಿ ಅಧ್ಯಕ್ಷನಾಗಿದ್ದೇನೆ. ನನ್ನ ಅನುಭವದಲ್ಲಿ ಇವತ್ತು ಸುಮಾರು 20-30 ಪರ್ಸೆಂಟೇಜಷ್ಟು ನಿಜವಾದ ಬೋನಫೈಡ್, ಜೆನ್ಯೂನ್ ಅನ್ ಅಥರೈಸ್ಡ್ ಕಲ್ಟಿವೇಟರ್ಸ್ ಇವತ್ತು ಅರ್ಜಿ ಹಾಕಲಿಕ್ಕೆ ಆಗಿಲ್ಲ. ಬಹುಶಃ ಅವರಿಗೆ ಇರತಕ್ಕಂಥ ತಿಳುವಳಿಕೆಯ ಅಭಾವದ ಕೊರತೆ ಇರಬಹುದು. ಬಹಳಷ್ಟು ಜನ ಲೇಟಾಗಿ ಅರ್ಜಿ ಹಾಕಿದ್ದಾರೆ. ತಾವು ಬೇಕಾದರೆ ಜಿಲ್ಲಾಧಿಕಾರಿಗಳ ಕಛೇರಿಗಳಿಂದ ದಾಖಲಾತಿಗಳನ್ನು ತರಿಸಿ ನೋಡಿ. ಇವತ್ತು ನಮ್ಮ ಕಮಿಟಿ ಮುಂದೆ ಅರ್ಜಿ ಹಾಕಿರುವುದು ಇನ್ನೂ ತೀರ್ಮಾನವಾಗಿಲ್ಲವೆಂದು ಹೇಳುತ್ತಾರೆ. ನಾವು ಅಂತಹ ಅರ್ಜಿಯ ಒಳಹೊಕ್ಕು ನೋಡಿದಾಗ ಅವರು ಲೇಟಾಗಿ ಅರ್ಜಿ ಹಾಕಿರುವುದು ಕಂಡುಬರುತ್ತದೆ. ಮಾನ್ಯ ಮಾಧುಸ್ವಾಮಿಯವರು ಹೇಳಿರತಕ್ಕದ್ದರಲ್ಲಿ ಒಂದು ಅರ್ಥ ಇದೆ ಎಂದು ನನಗನಿಸುತ್ತದೆ. ಮಾನ್ಯ ಅಧ್ಯಕ್ಷರೇ ತಾವೇ ಒಮ್ಮೆ ಯೋಚನೆ ಮಾಡಿ ನೋಡಿ, ಈಗ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದಾರೆ. ಅವರು ಸುಮೋಟೋ ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಮೆಕ್ಯಾನಿಸಂ ಏನು ಎಂದು ಇದರಲ್ಲಿ ಹೇಳಿಲ್ಲ. ಅಕ್ರಮ ಸಾಗುವಳಿ ಮಾಡಿದವನು ನಿಗದಿತ ಅವಧಿಯಲ್ಲಿ ಅರ್ಜಿ ಹಾಕಿಲ್ಲ ಎಂದರೆ ಡಿ.ಸಿ. ಯಾವ ಆಧಾರದ ಮೇಲೆ ಆತ ಅರ್ಜಿ ಹಾಕದೇ ಸಕ್ರಮಗೊಳಿಸಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಪ್ಲಿಕೇಶನ್ ಹಾಕಿರಬೇಕು ಎಂದು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ಸ್‌ನಲ್ಲಿ ಇದೆ. ನಾನು ಆಗಲೇ ಆ ಅಂಶವನ್ನು ಹೇಳಲಿಲ್ಲ.

ಶ್ರೀ ಆರ್. ನಾರಾಯಣ್ : ಆ ರೀತಿ ಇದ್ದರೆ ನನಗೆ ಸಮಾಧಾನವಾಗುತ್ತದೆ. ಎಲ್ಲಾ ಶಾಸಕರ ಅಭಿಪ್ರಾಯದ ಮೇರೆಗೆ ಇದರ ಬಗ್ಗೆ ಅಧಿಕಾರ ಕಮಿಟಿಗೆ ಕೊಡಬೇಕು. ಡಿ.ಸಿ. ಮುಂದೆ ಅರ್ಜಿ ಹಾಕಿದ್ದರೆ ಎಷ್ಟು ಮಹತ್ವ ಇರುತ್ತದೋ ಶಾಸಕರ ಅಧ್ಯಕ್ಷತೆಯ ಕಮಿಟಿಗೆ ವಹಿಸಿದರೂ ಅಷ್ಟೇ ಮಹತ್ವ ಇರುತ್ತದೆ. ಖರಾಬ್ ಲ್ಯಾಂಡ್ ಮತ್ತು ಗೋಮಾಳ ಲ್ಯಾಂಡ್ ಅಕ್ರಮ ಸಾಗುವಳಿ ಆಗಿರುವುದನ್ನು ಸಕ್ರಮಗೊಳಿಸಲು ಮಾತ್ರ ಇದರಲ್ಲಿ ಹೇಳಲಾಗಿದೆ. ಫಾರೆಸ್ಟ್ ಲ್ಯಾಂಡ್ ಮತ್ತು ಎಕ್ಸೈಜ್ ಲ್ಯಾಂಡ್ ಕೂಡ ಅಕ್ರಮ ಸಾಗುವಳಿ ಆಗಿವೆ.

ಅಧ್ಯಕ್ಷರು : ಅದಕ್ಕೆಲ್ಲಾ ಇದು ಅನ್ವಯಿಸುವುದಿಲ್ಲ ಬಿಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, 94-ಬಿಗೆ ಈಗ ಅಮೆಂಡ್‌ಮೆಂಟ್ ಮಾಡಿದಲ್ಲಿ, ಅಪ್ಲಿಕೇಷನ್ ಹಾಕಲಿಕ್ಕೆ ಕಂಡೀಷನ್ಸ್ ಇಂಪೋಸ್ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಕಂಡೀಷನ್ಸ್ ಇಂಪೋಸ್ ಮಾಡಿದ್ದು ಸರಿಯಲ್ಲ. ವಾಸ್ತವಿಕವಾಗಿ ಏಕೆ ಡಿಲೇ ಆಯಿತು? ಇತ್ಯಾದಿ

2-3 ಕಂಡೀಷನ್ಸ್ ಇದರಲ್ಲಿ ಕೊಟ್ಟಿದ್ದಾರೆ. ಡಿಲೇ ಏಕೆ ಆಯಿತು? ಇತ್ಯಾದಿ 2-3 ಕಂಡೀಷನ್ಸ್ ಇದರಲ್ಲಿ ಕೊಟ್ಟಿದ್ದಾರೆ. ಡಿಲೇ ಏಕೆ ಆಯಿತು ಎಂಬುದನ್ನು ಯಾರಾದರೂ ವ್ಯಕ್ತಿ ಸಾಬೀತು ಪಡಿಸಬೇಕಾದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಕಂಡೀಷನ್ ತೆಗೆಯಬೇಕೆಂದು ನಾನು ಕೇಳುತ್ತೇನೆ. ಎರಡನೆಯದಾಗಿ, ಮುನಿಸಿಪಾಲಿಟಿ ಏರಿಯಾದ ವ್ಯಾಪ್ತಿಯಿಂದ 5 ಕಿ.ಮೀ. ಎಂದು ಇದೆ. ಇದನ್ನು 1990ನೇ ಇಸವಿಯಲ್ಲಿ ಅಸ್ತಿತ್ವದಲ್ಲಿದ್ದಂತಹ ಮುನಿಸಿಪಾಲಿಟಿಯಿಂದ 5 ಕಿ.ಮೀ. ವ್ಯಾಪ್ತಿಯೊಳಗೆ ಇರುವುದು ಎಂದು ಮಾಡಬೇಕು. ಏಕೆಂದರೆ ನಮ್ಮಂತಹ ಗ್ರಾಮಾಂತರ ಪ್ರದೇಶಗಳಲ್ಲಿ ಮುನಿಸಿಪಾಲಿಟಿ ಸಾಧಾರಣವಾಗಿ ವಿಲೇಜ್‌ಗಳಿಂದ ಎಕ್ಸ್‌ಟೆಂಡ್ ಆಗುತ್ತದೆ. ಆದಕಾರಣ 1990ನೇ ಇಸವಿಯಲ್ಲಿ ಇದ್ದಂತಹ ಮುನಿಸಿಪಾಲಿಟಿಯಿಂದ 5 ಕಿ.ಮೀ. ದೂರದಲ್ಲಿ ಎಂದು ಮಾಡಬೇಕು. 94-ಬಿನಲ್ಲಿ 'ಪರಂತು, ಇತರ ಯಾವೊಬ್ಬ ವ್ಯಕ್ತಿಯು ಅದೇ ಭೂಮಿಯ ಮಂಜೂರಾತಿಗೆ 94ಎ ಪ್ರಕರಣದ ಅಡಿ ಸಲ್ಲಿಸಲಾಗದ್ದ ಅರ್ಜಿಯು ಆ ಪ್ರಕರಣದ ಅಡಿ ಪರಿಶೀಲನೆಗಾಗಿ ಬಾಕಿ ಉಳಿದಿದ್ದರೆ, ಅಂಥ ಅರ್ಜಿಯನ್ನು ಜಿಲ್ಲಾಧಿಕಾರಿ ಅಥವಾ ಸಂದರ್ಭಾನುಸಾರ ಅಂಥ ಪ್ರಾಧಿಕೃತ ಅಧಿಕಾರಿಗೆ ವರ್ಗಾಯಿಸತಕ್ಕದ್ದು.... ಎಂದು ಇದೆ. ಇನ್ ಟೋಟಲ್ ಏನಾಗಿದೆ ಎಂದರೆ, ಹಿಂದಿನ ಕಮಿಟಿಗಳೂ ರದ್ದಾಗಬೇಕು, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡಬೇಕು ಎಂದು ಮಾಡಿದ್ದಾರೆ. ಅದು ಸರಿಯಲ್ಲ. ಕಮಿಟಿ ಅಸ್ತಿತ್ವದಲ್ಲಿ ಇರಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ 94-ಎ ಪ್ರಕರಣದಲ್ಲಿ ಅಂದರೆ, 94-ಎ ಅನಧಿಕೃತ ಅನುಭೋಗದ ಕೆಲವು ಪ್ರಕರಣಗಳನ್ನು ಸಮಿತಿಯನ್ನು ರಚಿಸುವ ಮೂಲಕ ಸಕ್ರಮಗೊಳಿಸುವುದು ಇತ್ಯಾದಿ- ಅಡಿಯಲ್ಲಿ 'ಪರಂತು ಹಾಗೆ ಮಂಜೂರು ಮಾಡಲಾದ ಭೂಮಿಯ ಅಂಥ ವ್ಯಕ್ತಿಯು ಈಗಾಗಲೇ ಧಾರಣ ಮಾಡಿರುವ ಭೂಮಿಯೂ ಸೇರಿ 'ಡಿ' ವರ್ಗದ ಅಥವಾ ಅದಕ್ಕೆ ತತ್ಸಮಾನ ವರ್ಗದ ಎರಡು ಹೆಕ್ಟೇರು ಭೂಮಿಗಿಂತ ಹೆಚ್ಚಿರತಕ್ಕದ್ದಲ್ಲ' ಎನ್ನುವುದು ಈಗಾಗಲೇ ಇದೆ. ಮಲೆನಾಡಿನ ನಮ್ಮ ಎಲ್ಲಾ ಭೂಮಿಯೂ ಕೂಡ 'ಸಿ' ವರ್ಗದ ಭೂಮಿ. ಈಗಾಗಲೇ ಎರಡೂವರೆ ಎಕರೆ ತರೀ ಜಮೀನು ಅವನಿಗೆ ಇದ್ದರೆ ಅವನಿಗೆ ಒಂದು ಗುಂಟೆಯನ್ನೂ ಕೂಡ ನಾವು ಮಂಜೂರು ಮಾಡಲಿಕ್ಕೆ ಬರುವುದಿಲ್ಲ. ನಮ್ಮಲ್ಲಿ ಎರಡೂವರೆ ಎಕರೆಯಲ್ಲಿ ಯಾವುದೇ ಬೆಳೆಯೂ ಕೂಡ ಬೆಳೆಯುವುದಿಲ್ಲ. ನಾನು ಈ ಬಗ್ಗೆ ಮಾನ್ಯ ಸೋಮಶೇಖರ್‌ರವರ ಬಳಿ ಮಾತನಾಡಿದ್ದೇನೆ. ತಾವು ದಯಮಾಡಿ ಇದನ್ನು 'ಸಿ' ಕ್ಲಾಸ್ ಲ್ಯಾಂಡ್ ಎಂದು ಮಾಡಿದರೆ ತುಂಬಾ ಜನಕ್ಕೆ ಅನುಕೂಲವಾಗುತ್ತದೆ. ಬಡವರಿಗೆ ಅನುಕೂಲ ಮಾಡಬೇಕು ಎಂಬ ಉದ್ದೇಶದಿಂದ ನೀವೇನು ಇದನ್ನು ತರುತ್ತಿದ್ದೀರಿ, ಅದರಂತೆ ಎಲ್ಲರಿಗೂ ಕೂಡ ಆಗ ಅನುಕೂಲವಾಗುತ್ತದೆ. ಆಗ ನಮ್ಮ ಮಲೆನಾಡಿನಲ್ಲಿರತಕ್ಕಂತಹ ಜನರಿಗೆ ಇದನ್ನು ಕೊಡಲಿಕ್ಕೆ ಬರುತ್ತದೆ. 'ಸಿ' ವರ್ಗದ ಎರಡೂವರೆ ಹೆಕ್ಟೇರ್ ಜಮೀನು ಎಂಬುದನ್ನು ತಾವು ಮಾಡಬೇಕು. ಈಗ ಧಾರಣೆ ಮಾಡಿರುವ ಭೂಮಿಯೂ ಸೇರಿ 'ಸಿ' ವರ್ಗದ ಎರಡು ಹೆಕ್ಟೇರು ಭೂಮಿಗಿಂತ ಹೆಚ್ಚಿರತಕ್ಕದ್ದಲ್ಲ ಎಂದು ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. 'ಡಿ' ವರ್ಗದ ಜಮೀನು ಗುಲ್ಬರ್ಗಾ, ರಾಯಚೂರುಗಳನ್ನು ಬಿಟ್ಟರೆ ದಕ್ಷಿಣ ಕನ್ನಡ, ಉತ್ತರ ಕನ್ನಡವೂ ಸೇರಿದಂತೆ ನಮ್ಮ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಮತ್ತೆ 94-ಬಿ ಅಡಿಯಲ್ಲಿ 79ನೇ

ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಭೂಮಿಯೂ ಸೇರಿದಂತೆ 94ನೇ ಪ್ರಕರಣದ ಅಡಿ ಯಾವ ಭೂಮಿಯಿಂದ ಒಕ್ಕಲೆಬ್ಬಿಸಲು ಅವನು ಬದ್ಧನಾಗಿರುವನೋ ಆ ಯಾವುದೇ ಭೂಮಿಯನ್ನು 1990ರ ಏಪ್ರಿಲ್ ಹದಿನಾಲ್ಕನೇ ದಿನಾಂಕಕ್ಕೆ ಮೊದಲು ಅನಧಿಕೃತವಾಗಿ ಸ್ವಾಧೀನ ಪಡಿಸಿಕೊಂಡಿದ್ದನೆಂದು,..... ಏನಿದೆ, ಇದರಲ್ಲಿ ರೆವಿನ್ಯೂ ಇಲಾಖೆಯಲ್ಲಿರತಕ್ಕ ಕೊಡಲಿಕ್ಕೆ ಬಾರದಂತಹ ಅನೇಕ ಜಮೀನುಗಳೂ ಸಹ ಸೇರುತ್ತವೆ. ಇದು ಸ್ವಾಗತಾರ್ಹವಾಗಿರತಕ್ಕಂತಹ ಒಂದು ಅಮೆಂಡ್‌ಮೆಂಟ್ ಆಗಿದೆ. ಆದರೆ ಈಗಾಗಲೇ ಯಾರು ಅರ್ಜಿ ಹಾಕಿದ್ದಾರೆ, ಯಾವುದನ್ನು ಮಾಡಲಿಕ್ಕೆ ನಮಗೆ ಬರುತ್ತಿರಲಿಲ್ಲವೋ ಅಂತಹ ಅರ್ಜಿಗಳಿಗೂ ಕೂಡ ಇದರಲ್ಲಿ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಈಗಾಗಲೇ ಅಂತಹವರ ಅರ್ಜಿ ತಿರಸ್ಕಾರ ಆಗಿವೆ. ಅದನ್ನು ಅವಕಾಶ ಮಾಡಿಕೊಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್(ಸಾತನೂರು) : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ಏನು ಅಮೆಂಡ್‌ಮೆಂಟ್ ತಂದಿದ್ದಾರೆ ಇದನ್ನು ತರಬೇಕೆಂಬುದು ನಮ್ಮ ಬಹಳ ದಿನಗಳ ಬೇಡಿಕೆಯಾಗಿತ್ತು. ನಾವು ಇದನ್ನು ತರಬೇಕೆಂದು ಅನೇಕ ಪ್ರಶ್ನೆಗಳನ್ನೂ ಕೂಡ ಹಾಕಿದ್ದೆವು. ನಾನು ಇದನ್ನು ಸ್ವಾಗತಿಸುತ್ತೇನೆ. ತಾಲ್ಲೂಕಿನ ಬಗರ್‌ಹುಕುಂ ಸಮಿತಿ ಏನಿದೆ, ಅದರ ವ್ಯಾಪ್ತಿಗೇ ಇದನ್ನೂ ವಹಿಸಬೇಕೆಂದು ನಾನು ಕೋರುತ್ತೇನೆ. ಅಪೀಲ್ ಬೇಕಾದರೆ ಡಿ.ಸಿ. ಮುಂದೆ ಇರುವಂತೆ ಮಾಡಬಹುದು. ಇದರ ಜೊತೆಗೆ ಮತ್ತೊಂದು ವಿಚಾರವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಈ ಅರ್ಜಿ ಹಾಕುವಂತಹ ಸಂದರ್ಭದಲ್ಲಿ, ಆ ಕಮಿಟಿಯಲ್ಲಿ ನಮಗೇನಾಗಿದೆ ಎಂದರೆ, ಇಲ್ಲಿ ಕೆಲವೊಂದು ಲ್ಯಾಂಡ್‌ಗಳನ್ನು 'ಎ' ಕ್ಲಾಸ್ 'ಬಿ' ಕ್ಲಾಸ್ ಮತ್ತು 'ಸಿ' ಕ್ಲಾಸ್ ಎಂದು ಸ್ಪೆಸಿಫೈ ಮಾಡಿದ್ದೀರಿ. ಈಗ ನಮ್ಮಲ್ಲಿ ಪಾಣಿಗಳಲ್ಲಿ ಇಡೀ ಊರನ್ನೇ ಖರಾಬ್ ಎಂದು ಮಾಡಿ ಬಿಟ್ಟಿದ್ದಾರೆ. ಅಲ್ಲಿ 30-40 -50 ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ. ಪಹಣಿಯಲ್ಲಿ ಖರಾಬ್ ಎಂದು ಇರುವುದರಿಂದ ನಾವು ಅವರಿಗೆ ಜಮೀನನ್ನು ಮಂಜೂರು ಮಾಡಲು ಆಗುತ್ತಿಲ್ಲ. ಖರಾಬ್ ಎಂದು ಇರುವುದರಿಂದ ನನ್ನ ತಾಲ್ಲೂಕಿನಲ್ಲೇ ಸುಮಾರು 3 ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ಇದನ್ನು ಡೆಪ್ಯುಟಿ ಕಮೀಷನರ್‌ರವರು ಇನ್ಸ್‌ಪೆಕ್ಷನ್ ಮಾಡಿ ಅದು ಖರಾಬ್ ಇಲ್ಲದೇ ಇರುವಂಥಾದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ ಎಂದರೆ ಅದಕ್ಕೆ ವಿನಾಯಿತಿ ಕೊಡುವಂಥ ಕೆಲಸವನ್ನು ತಾವು ಮಾಡಬೇಕು. ಖರಾಬ್ ಎಂದು ಇರುವ ಜಮೀನು ಕೂಡ ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ.

ಶ್ರೀ ಕಾಗೋಡು ತಿಮ್ಮಪ್ಪ : ಎಲ್ಲಾ ಜಮೀನನ್ನು ಖರಾಬ್ ಎಂದು ಕರೆಯುವುದಿಲ್ಲ. ಖರಾಬ್ ಎಂದು ಯಾವಾಗ ಹೇಳುತ್ತೇವೆಂದರೆ, ಸಾಗುವಳಿಗೆ ಯೋಗ್ಯವಿಲ್ಲದೇ ಇರತಕ್ಕಂಥ ಕಲ್ಲುಭೂಮಿ ಇದ್ದರೆ ಅಥವಾ ಹೊಳೆ ಜಾಗದಲ್ಲಿದ್ದರೆ ಅದನ್ನು ಖರಾಬ್ ಎಂದು ಹೇಳುತ್ತೇವೆ. ಬಹುಶಃ ಅದರಲ್ಲಿ ಕಲ್ಲು ಇರಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಪಹಣಿಯಲ್ಲಿ 500 ಎಕರೆ ಇದ್ದರೆ, ಆ 500 ಎಕರೆಯನ್ನೂ ಖರಾಬ್ ಎಂದು ತೋರಿಸಿದ್ದಾರೆ. ಜಿಲ್ಲಾಧಿಕಾರಿಗಳು ಅದನ್ನು ಇನ್ಸ್‌ಪೆಕ್ಷನ್ ಮಾಡಲಿ. ಅಂಥಾದ್ದನ್ನು ಮಂಜೂರು ಮಾಡಲು ಸರ್ಕಾರ ದಯಪಿಟ್ಟು ಒಂದು ಅವಕಾಶವನ್ನು ಮಾಡಿಕೊಡಬೇಕು. ಅದನ್ನು ಇಲ್ಲಿ ಸೇರಿಸಬೇಕು ಎಂದು ತಮ್ಮ ಮೂಲಕ ನಾನು ಮನಪಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಅಕ್ರಮ ಜಮೀನನ್ನು ಸಕ್ರಮ ಮಾಡಲು ಅರ್ಜಿಯನ್ನು ಕೊಡಲು ಸಮಯಾವಕಾಶವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ತಾವು, ಅರ್ಜಿ ಹಾಕಬೇಕಾಗಿಲ್ಲ ಎನ್ನತಕ್ಕಂಥಾದ್ದನ್ನು ಹೇಳುತ್ತೀರಿ. ಈ ಹಿಂದೆ ಅರ್ಜಿಯನ್ನು ಹಾಕಿದ್ದರೆ ಮಾತ್ರ ತೆರಿಗೆಯನ್ನು ತೆಗೆದುಕೊಳ್ಳತಕ್ಕಂಥಾದ್ದಕ್ಕೆ ಅವಕಾಶವಿತ್ತು. ಈಗ ಅರ್ಜಿಯನ್ನು ಹಾಕದೇ ತಾವು ತೆರಿಗೆಯನ್ನು ಯಾವ ರೀತಿಯಾಗಿ ತೆಗೆದುಕೊಳ್ಳುತ್ತೀರಿ? ಅರ್ಜಿಯನ್ನು ಹಾಕಲೇ ಬೇಕಾಗುತ್ತದೆ. ಅರ್ಜಿಯನ್ನು ಹಾಕಲು ಸಮಯವನ್ನು ಕೊಡಬೇಕಾಗುತ್ತದೆ. ಸಮಯ ಕೊಟ್ಟು ಅದರ ಪ್ರಕಾರ ತನಿಖೆಯನ್ನು ಮಾಡಬೇಕಾಗುತ್ತದೆ. ಅರ್ಜಿ ಹಾಕಲು ಅವಕಾಶವಿದೆ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಅರ್ಜಿ ನಮೂನೆ-50ರಲ್ಲಿ ಅರ್ಜಿಯನ್ನು ಹಾಕಬೇಕು ಎನ್ನುವುದನ್ನು ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಕನ್‌ಫ್ಯೂಷನ್ ಮಾಡಿಕೊಳ್ಳುವುದು ಬೇಡ. Section 94A of the Karnataka Land Revenue Act, 1964 provides for grant of certain land unauthorisedly occupied by any person prior to 14th day of April 1990 for which he had to apply for grant of such land within a stipulated time. ಅಂದರೆ ಅಪ್ಲೈ ಮಾಡಲು ಅವಕಾಶವಿದೆ. ಯಾರು ಅರ್ಜಿ ಕೊಡುತ್ತಾರೆ, ಅದನ್ನೇ ತೆಗೆದುಕೊಂಡು ತನಿಖೆಯನ್ನು ಮಾಡಿ ಗ್ರಾಂಟ್ ಮಾಡುತ್ತಾರೆ. ಆದರೆ, ಅದಕ್ಕೆ ನೀವು ಕೂಡಲೇ ರೂಲ್ಸ್‌ಗಳನ್ನು ಮಾಡಬೇಕು. ಅದಕ್ಕೆ 30-90 ದಿವಸ ಮಾಡಬಾರದು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅರ್ಜಿ ಹಾಕಬೇಕೋ, ಬೇಡವೋ ಅರ್ಜಿ ಹಾಕಲು ಸಮಯಾವಕಾಶವನ್ನು ಕೊಡುತ್ತೀರೋ ಎನ್ನುವುದನ್ನು ಹೇಳಬೇಕು. ಅರ್ಜಿಯನ್ನು ತನಿಖೆ ಮಾಡತಕ್ಕಂಥ ಸಂದರ್ಭದಲ್ಲಿ ನೀವು ಅದು ಅಸಿಸ್ಟೆಂಟ್ ಕಮೀಷನರ್ ಲೆವಲ್‌ನಲ್ಲಿ ಎಂದು ಹೇಳಿದ್ದೀರಿ. ನಾನು ತಮ್ಮಲ್ಲಿ ಒಂದು ಪ್ರಶ್ನೆಯನ್ನು ಕೇಳಲು ಇಚ್ಛಿಪಡುತ್ತೇನೆ, ನಮ್ಮಲ್ಲಿ ಈಗಿರತಕ್ಕಂಥ ಕಾಯಿದೆಯಲ್ಲಿ ಲ್ಯಾಂಡ್ ಗ್ರಾಂಟ್ ಮಾಡಲು ಅವಕಾಶವಿದೆ. ಅದೇ ರೀತಿ ಲಭ್ಯತಾ ಪಟ್ಟಿಯಲ್ಲಿರತಕ್ಕಂಥವರಿಗೆ ಲ್ಯಾಂಡ್ ಗ್ರಾಂಟ್ ಮಾಡುತ್ತೀರಿ. ಆದರೆ ಅದನ್ನು ಎಷ್ಟು ಪ್ರಮಾಣದಲ್ಲಿ ಮಾಡಲು ಆಗುತ್ತದೆ? ನಾವು ಎನ್‌ಕ್ರೋಚ್‌ಮೆಂಟ್ ಆಕ್ಟಿಸಿಷನ್ ಆಕ್ಟ್ ಪ್ರಕಾರ ಸಮರ್ಪಕವಾಗಿ ಮಾಡದೇ ಇರುವುದರಿಂದ ಇವೆಲ್ಲಾ ಪೆಂಡಿಂಗ್ ಇದೆ. ಆದ್ದರಿಂದ, ನನ್ನ ಆನಿಸಿಕೆ ಏನೆಂದರೆ, ಈ ಹಿಂದೆ ತಾವು ಏನು ಅವಕಾಶವನ್ನು ಕೊಟ್ಟಿದ್ದೀರಿ. ಅದೇ ರೀತಿ ಈಗಲೂ ಒಂದು ಸಮಯವನ್ನು ನಿಗದಿ ಮಾಡಿ ಅರ್ಜಿಯನ್ನು ಕೊಡಲು ಅವಕಾಶವನ್ನು ಕಲ್ಪಿಸಿಕೊಡಬೇಕು ಮತ್ತು ಸಮಿತಿ ಅದನ್ನು ತೀರ್ಮಾನ ಮಾಡಬೇಕು ಎನ್ನುವುದು ನನ್ನ ವಾದ. ಈಗಿರತಕ್ಕಂಥ ಸೆಕ್ಷನ್ 94-ಎ ನಲ್ಲಿ ಒಂದನೇ ಸಮಿತಿಗೆ ಶಾಸಕರು ಅಧ್ಯಕ್ಷರಾಗಿದ್ದಾರೆ. ಅದನ್ನು ತೆಗೆದುಹಾಕಿ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ತಮ್ಮ ಆಲೋಚನೆ ಏನಿದೆ ಎನ್ನತಕ್ಕಂಥಾದ್ದು ನನಗೆ ಗೊತ್ತಿಲ್ಲ. ಒಂದು ಬಿಲ್ ಬಂದಿದೆ. ಆದರೆ ತಾವು ಅದನ್ನು ಮಂಡಿಸಿಲ್ಲ. ಆದರೆ ನಾನು ಕೇಳುತ್ತಿರತಕ್ಕಂಥಾದ್ದು ಏನೆಂದರೆ, ಅದೇ ತಾಲ್ಲೂಕಿನಲ್ಲಿ ಶಾಸಕರು ಇದ್ದರೆ ಎರಡನೇ ಸಮಿತಿಗೆ ಏಕೆ ಸೇರಿಸಿಕೊಳ್ಳಬಾರದು? ಎನ್ನುವುದು ನನ್ನ ಪ್ರಶ್ನೆ. ಇದಕ್ಕೆ

ತಾವು ಉತ್ತರ ಕೊಟ್ಟರೆ ಆಯಿತು. ಸೇರಿಸಿಕೊಳ್ಳಲು ಆಗುವುದಿಲ್ಲ, ಆಗುತ್ತದೆ ಎನ್ನುವುದು ಬೇರೆ ವಿಚಾರ. ಸಮಿತಿಯ ಮುಖಾಂತರ ಅರ್ಜಿಯನ್ನು ಕರೆಯಲು ಅವಕಾಶ ಮಾಡತಕ್ಕಂಥಾದ್ದರಲ್ಲಿ ತಾಂತ್ರಿಕ ತೊಂದರೆಗಳಿವೆ. ಅಕ್ರಮವನ್ನು ಸಕ್ರಮ ಮಾಡುವಂಥ ಕೆಲವು ಜಮೀನು ಕೆಲವೊಂದು ವೇಳೆ ಕುಮ್ಕಿ ಜಮೀನು ಆಗಿರುತ್ತದೆ. ಅದು ಕುಮ್ಕಿ ಜಮೀನು ಎನ್ನುವುದು ಇಂಟರ್ ಪ್ರಿಟೇಷನ್ ಆಗಬೇಕಾಗಿದೆ. ಭೂ ಮಸೂದೆಯಲ್ಲಿ ಅರ್ಜಿ ಹಾಕಿದವರ ಭೂಮಿಗೆ ತಾಗಿರತಕ್ಕಂಥ ಭೂಮಿ ಕುಮ್ಕಿ ಭೂಮಿಯೇ ಅಥವಾ ಕುಮ್ಕಿ ಭೂಮಿ ಅಲ್ಲವೇ ಅಥವಾ ಅದು ಅಕ್ರಮವನ್ನು ಸಕ್ರಮಗೊಳಿಸಲು ಅರ್ಜಿ ಹಾಕತಕ್ಕಂಥ ಭೂಮಿಯೇ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಅದು ಇವತ್ತಿಗೂ ಸಹ ತಕರಾರಿನಲ್ಲಿದೆ. ಈ ಬಗ್ಗೆ ನಾನು ತಮ್ಮಿಂದ ಸ್ಪಷ್ಟೀಕರಣವನ್ನು ಕೇಳಲು ಇಚ್ಛಿಪಡುತ್ತೇನೆ. ಮತ್ತು ಕುಮ್ಕಿ ಹಕ್ಕನ್ನು ರದ್ದು ಮಾಡಿ ಭೂ ಮಂಜೂರಾತಿ ಮಾಡತಕ್ಕಂಥ ವಿಧೇಯಕವನ್ನು ಸಹ ಅತಿ ಅಗತ್ಯವಾಗಿ ತರಬೇಕು ಎನ್ನತಕ್ಕಂಥ ಮನವಿಯನ್ನು ಸಹ ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಗಮನವನ್ನು ಸೆಕ್ಷನ್ 94-ಬಿಗೆ ಹರಿಸಬೇಕು. ಅದು ಅಗತ್ಯವೇ ಎಂದು ನೋಡಬೇಕು. ಸೆಕ್ಷನ್ 94-ಬಿಯಲ್ಲಿ 1 ಮತ್ತು 2 ಆದಮೇಲೆ ನೀವು ಪ್ರೊವೈಸೋ ಹಾಕಿದ್ದೀರಿ. 1 ಮತ್ತು 2 ರಲ್ಲಿ ನೀವು ಏನು ಹೇಳುತ್ತೀರಿ ಎಂದರೆ, ಈ ಕೆಳಕಂಡವರು

(ii) being eligible to grant of such land under Section 94A has failed to apply for such grant under sub-section (4) of the said section within the period specified therein;

ಅಪ್ಲೈ ಮಾಡುವುದಕ್ಕೆ ಅವಕಾಶ ಮಾಡಿದ್ದೀರಿ ಎಂದು 1 ಮತ್ತು 2ರಲ್ಲಿ ಹೇಳಿದ್ದೀರಿ. ಆದರೆ ಪ್ರೊವೈಸೋನಲ್ಲಿ ಏನು ಹೇಳುತ್ತೀರಿ ಎಂದರೆ.

"Provided that nothing in this clause shall apply to a person who has become eligible for grant of land by virtue of the Karnataka Land Revenue (Amendment) Act, 1997; 1997ರ ಕಾಯಿದೆ ಎಂದರೆ ಇದೇ ಕಾಯಿದೆ. ಈ ಕಾಯಿದೆ ಇವರಿಗೆ ಅಪ್ಲೈ ಆಗುವುದಿಲ್ಲ ಎಂದು ಹೇಳುತ್ತೀರಿ. I just want a clarification. Is there any need for such a proviso? ಇದರ ಪ್ರಕಾರ ಇವರೆಲ್ಲಾ ಎಲಿಜಬಲ್, ಇವರು ಅಪ್ಲೈ ಮಾಡಬಹುದು ಎಂದು ಸೆಕ್ಷನ್ 1 ಮತ್ತು 2ರಲ್ಲಿ ಹೇಳುತ್ತೀರಿ. ಆದರೆ ಪ್ರೊವೈಸೋದಲ್ಲಿ 'nothing in this clause shall apply' ಎಂದು ಹೇಳುತ್ತೀರಿ. ಅಂದರೆ ಯಾರು ಅಪ್ಲೈ ಮಾಡಬೇಕು? Provided that nothing in this clause shall apply ಎಂದು ಈ ಪ್ರೊವೈಸೋವನ್ನು ತಪ್ಪಾಗಿ ಹಾಕಿದ್ದೀರಾ? ಅಥವಾ ಮಿಸ್ಟೇಕ್ ಹಾಕಿದ್ದೀರಾ? If it is a mistake kindly delete it.

ಅಧ್ಯಕ್ಷರು : ಬಹಳ ಸರಳವಾಗಿದೆ. ಡ್ರಾಫ್ಟ್ ಸೆಕ್ಷನ್‌ನಲ್ಲಿ ಆಗಿರುವ ಮಿಸ್ಟೇಕ್ ಎಂದು ತಾವು ಹೇಳುತ್ತಿದ್ದೀರಿ

ಶ್ರೀಮತಿ ಪ್ರಮೀಳ ನೇಸರ್ಗಿ : ದಯವಿಟ್ಟು ಇದನ್ನು ಪಾಸ್ ಮಾಡುವುದಕ್ಕೆ ಮುಂಚೆ ಇದನ್ನು ನೋಡಬೇಕು. ಇಲ್ಲದಿದ್ದರೆ ನಾವು ಇದನ್ನು ಮಾಡಿದರೂ ಪ್ರಯೋಜನವಾಗುವುದಿಲ್ಲ. ಎರಡನೆಯದಾಗಿ, ತಮ್ಮೆಲ್ಲರ ಗಮನಕ್ಕೆ ಬಂದಿರುವಂತೆ ಮೊನ್ನೆ ತಾನೇ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಫಾರೆಸ್ಟ್ ಲ್ಯಾಂಡನ್ನು ಖಾಸಗಿಯವರಿಗೆ ಕೊಡಬಾರದು, ಫಾರೆಸ್ಟ್‌ಅನ್ನು ಪ್ರಿಸರ್ವ್ ಮಾಡಬೇಕು ಎಂದು ಆದೇಶ ನೀಡಿದೆ. ಇದರಲ್ಲಿ ಒಂದು ಕ್ಲೂ ಕೊಟ್ಟಿದ್ದಾರೆ. ಏನು ಹೇಳಿದ್ದಾರೆ ಎಂದರೆ, "Provided further that where prior approval of the central Government under Section 2 of the Forest Conservation Act, 1980 (central Act 69 of 1980) Is required for grant of any land under this section, such grant shall not be made without such prior approval.

ಅಂದರೆ ಕೇಂದ್ರ ಸರ್ಕಾರದ ಅನುಮತಿಯನ್ನು ತೆಗೆದುಕೊಂಡು ಮಾಡಬಹುದು ಎಂದು ರಂಗೋಲಿ ಕೆಳಗೆ ತೂರುತ್ತಿದ್ದಾರೆ. ಚಿಕ್ಕಮಗಳೂರಿನಲ್ಲಿ ಆಗಿರುವ 416 ಎಕರೆ ಅನ್‌ಅಥರೈಸ್ಡ್ ಆಕ್ಯುಪೇಷನ್‌ಅನ್ನು ಪ್ರಿಯರ್ ಅಪ್ರೂವಲ್ ತೆಗೆದುಕೊಂಡು ಮಾಡುವುದಕ್ಕಾಗಿ ತಾವು ಇದನ್ನು ಮಾಡಿಕೊಂಡಿದ್ದೀರಿ ಎಂದು ನನ್ನ ಅನಿಸಿಕೆ. ಈ ಅರಣ್ಯ ಪ್ರದೇಶವನ್ನು ಯಾವುದೇ ಗ್ರ್ಯಾಂಟ್ ಕೊಡುವುದಕ್ಕೆ ಆಗುವುದಿಲ್ಲ. ಅರಣ್ಯ ನಾಶವಾಗುತ್ತಿರುವುದರಿಂದ ಇವತ್ತು ಪಶ್ಚಿಮ ಘಟ್ಟದಲ್ಲಿ ಮಳೆ ಬರುವುದು ಕೂಡ ಕಡಿಮೆಯಾಗಿದೆ. ಪ್ರಿಯರ್ ಅಪ್ರೂವಲ್ ತೆಗೆದುಕೊಂಡು ಕೊಡಬಹುದು ಎಂದು ಇಲ್ಲಿ ಹಾಕಿದ್ದಾರೆ.

ಅಧ್ಯಕ್ಷರು : ಅದು ಕಾಡಲ್ಲ. ಕಾಡು ಎಂದು ಹೆಸರು ಉಳಿದು ಹೋಗಿದೆ. ಕೆಲವು ಜಾಗಗಳಾದ ಸ್ಮಶಾನ, ಕೆರೆ ಅಂಗಳ ಇವುಗಳೆಲ್ಲಾ ಕಾಡು ಎಂದು ಬಂದಿರುತ್ತದೆ. ನಮ್ಮಲ್ಲಿ ಅನೇಕ ಜನ ನಿರ್ಗತಿಕರು ಸುಮಾರು ವರ್ಷಗಳಿಂದ ಉಳುಮೆ ಮಾಡಿಕೊಂಡು ಅಲ್ಲೇ ಇದ್ದಾರೆ. ಅಲ್ಲಿಂದಲೂ ಬರಬೇಕು ಎಂದು ಸರ್ಕಾರದವರು ಕರೆಸ್ಪಾಂಡೆನ್ಸ್ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಅದಕ್ಕೆ ಕ್ಲಿಯರೆನ್ಸ್ ಕೊಟ್ಟಿಲ್ಲ. ಚಿಕ್ಕಮಗಳೂರಿನ ಪ್ರಕರಣಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಬೇಕಾದರೆ ತಾವು ತಿಮ್ಮಪ್ಪನವರನ್ನೇ ಕೇಳಿ. ಅವರ ಊರಿನ ಸುತ್ತ ಇಂಥವರು ಇದ್ದಾರೆ. ಕಾಡು ಎಂದರೂ ಈ ಜಮೀನಿನಲ್ಲಿರುವವರು ಇಲ್ಲವೇ? ಸುಮಾರು ವರ್ಷಗಳಿಂದ ಮಾಡುತ್ತಿರುವ ಅನ್‌ಅಥರೈಸ್ಡ್ ಕಲ್ಟಿವೇಷನ್ ಅನ್ನು ರೆಗ್ಯುಲರೈಸೇಷನ್ ಮಾಡಿ ಎಂದು ಕೇಳುತ್ತಿದ್ದಾರಲ್ಲ, ಅವರಿಗೆ ಇದು ಅನ್ವಯಿಸುತ್ತದೆ.

SMT. PRAMILA NESARGI : Once it is declared as reserve Forest,.....

ಅಧ್ಯಕ್ಷರು : ಅದಕ್ಕೆ ಅವರು ಕ್ಲಿಯರೆನ್ಸ್ ಕೊಡಬೇಕಲ್ಲವೇ?

ಡಾ|| ಎಂ. ಪಿ. ಕರ್ಕಿ : ಇದು ಆಗುವುದೇ ಇಲ್ಲ. ಏಕೆಂದರೆ, ನಮಗೆ ಆ ಜಾಗ ಬೇಕೇ ಬೇಕು.

SMT. PRAMILA NESARGI : Under no circumstances forest land can be given.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ನನ್ನ

ಒಂದೇ ಒಂದು ಕೋರಿಕೆ ಎಂದರೆ ಎಕ್ಸೈಸ್ ಲ್ಯಾಂಡನ್ನೂ ಇದರ ವ್ಯಾಪ್ತಿಯಲ್ಲಿ ತರಲು ತಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇದು ಒಳ್ಳೆಯ ಸಲಹೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮಲ್ಲಿ ಬಹಳ ವರ್ಷಗಳಿಂದ ಎಕ್ಸೈಸ್ ಲ್ಯಾಂಡನ್ನು ಉಳುಮೆ ಮಾಡಿಕೊಂಡಿದ್ದಾರೆ, ಕನ್‌ಫರ್ಮೇಷನ್ ಸಿಗುತ್ತಿಲ್ಲ. ದಯಮಾಡಿ ಏನಾದರೂ ಮಾಡಿ ಎಕ್ಸೈಸ್ ಲ್ಯಾಂಡನ್ನೂ ಇದರ ವ್ಯಾಪ್ತಿಗೆ ತರಬೇಕು ಮತ್ತು ಇದನ್ನು ಡಿ.ಸಿ.ಯವರು ಮಾಡುತ್ತಾರೆ ಎನ್ನುವ ಭಾವನೆಯನ್ನು ತಾವು ಏಕೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ಅದರ ಬದಲು ಈಗಿರುವ ಸಮಿತಿಗಳನ್ನೇ ಬಲಪಡಿಸಿ, ಸರ್ವೇಯರ್‌ಗಳನ್ನು ಜಾಸ್ತಿ ಮಾಡಿ, ಆ ಸಮಿತಿಗಳಿಗೇ ಅಧಿಕಾರ ಕೊಟ್ಟರೆ ನೀವು ನಿರೀಕ್ಷೆ ಮಾಡಿದ್ದಕ್ಕಿಂತ ಮೊದಲೇ ಕೆಲಸವನ್ನು ಮಾಡಿಕೊಡುತ್ತೇವೆ. ಎರಡನೆಯದಾಗಿ, ಇದಕ್ಕೆ ಒಂದು ಕಟ್ ಆಫ್ ಡೇಟನ್ನು ಕೊಡಲೇಬೇಕು. ಯಾವ ಕಾಲಕ್ಕೆ ನೀವು ಅರ್ಜಿ ತೆಗೆದುಕೊಳ್ಳುವ ಕೆಲಸವನ್ನು ಕ್ಲೋಸ್ ಮಾಡುತ್ತೀರೆಂಬುದನ್ನು ಹೇಳದೇ ಹೋದರೆ, ದೊಡ್ಡ ಗೇಟನ್ನು ತೆಗೆದು ಬಿಟ್ಟ ಹಾಗಾಗುತ್ತದೆ. ಇದನ್ನು ರೂಲ್ಸ್‌ನಲ್ಲಿ ಅಳವಡಿಸಿಕೊಂಡು ತಾವು ಸ್ಪೆಸಿಫಿಕ್ ಆಗಿ ಹೇಳಬೇಕು.

ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮೊದಲನೆಯದಾಗಿ, ಈ ತಿದ್ದುಪಡಿಯನ್ನು ತಂದಿರುವುದನ್ನು ಅಭಿನಂದಿಸುತ್ತಾ, ಹುಲಬನಿ ಎನ್ನುವ ವರ್ಗದ ಒಂದು ಭೂಮಿ ಇದೆ. ಆದರೆ, ಅದರ ಉದ್ದೇಶ ಹಿಂದೆ ಒಳ್ಳೆಯದಿತ್ತೆಂದು ಕಾಣುತ್ತದೆ. ಆದರೆ, ಇವತ್ತಿಗೆ ಹುಲುಬನಿ ಎನ್ನುವುದು ತನ್ನ ನಿಜವಾದ ಕ್ಯಾರೆಕ್ಟರನ್ನು ಕಳೆದುಕೊಂಡಿದೆ. ಅದು ಯಾರದೋ ಸ್ವಾಧೀನದಲ್ಲಿದೆ. ಆ ಊರಿಗೆ ದನಕರುಗಳಿಗೆ ಕೂಡ ಅದರ ಅವಶ್ಯಕತೆ ಬಂದಿರುವುದಿಲ್ಲ. ಇದರ ಬಗ್ಗೆ ಕೂಡ ವಿಶೇಷವಾದ ಮಂಜೂರಾತಿಗೆ ಅವಕಾಶ ಕಲ್ಪಿಸಿಕೊಡಬೇಕು. ನಂಬರ್ ಕಾಣದ ಖರಾಬ್ ಅಂದರೆ ಇದಕ್ಕೆ ನಂಬರ್ ಮಾತ್ರ ಇರುವುದಿಲ್ಲ. ಖರಾಬು ಕಲ್ಪಿವಬಲ್ ಲ್ಯಾಂಡ್. ಸಾಕಷ್ಟು ಪ್ರದೇಶವಿರುತ್ತದೆ. ಅದಕ್ಕೂ ಕೂಡ ಮಂಜೂರಾತಿಗೆ ಅವಕಾಶ ಕಲ್ಪಿಸಿಕೊಡಬೇಕು

ಶ್ರೀ ಬಿ. ಸೋಮಶೇಖರ (ಕಂದಾಯ ಮಂತ್ರಿಗಳು) : ಈಗಾಗಲೇ ಮಾನ್ಯ ಖರ್ಗೆ ಮತ್ತು ಶ್ರೀ ಮಾಧುಸ್ವಾಮಿಯವರು ಹೇಳಿದ ವಿಚಾರ ಎಲ್ಲರೂ ಒಪ್ಪಿಕೊಳ್ಳುವಂಥದ್ದು. ಇದು ತಡವಾಗಬಾರದು, ಆದಷ್ಟು ಬೇಗ ರಿಲೀಫ್ ಸಿಗಬೇಕೆಂದು ಅವರು ಹೇಳುತ್ತಿದ್ದಾರೆ. ಅವರ ಉದ್ದೇಶವೇ ಸರ್ಕಾರದ ಉದ್ದೇಶವೂ ಆಗಿದೆ ಎನ್ನುವ ಸ್ಪಷ್ಟೀಕರಣವನ್ನು ಕೊಡಲು ಇಚ್ಛಿಸುತ್ತೇನೆ. ಈ ಪ್ರಕರಣಗಳಲ್ಲಿ ಸೆಕ್ಷನ್ 94 (ಎ) ಪ್ರಕಾರ, ಕಮಿಟಿಯನ್ನು ರಚಿಸಿ ಈ ಕಮಿಟಿಯವರು ದಿ: 14.4.90 ರೊಳಗೆ ಫಾರಂ ನಂ. 50ರಲ್ಲಿ ಯಾರು ಅರ್ಜಿ ಸಲ್ಲಿಸಿದ್ದಾರೋ, ಅಂಥವನ್ನು ಡಿಸ್‌ಪೋಸ್ ಮಾಡುವ ಕೆಲಸ ಈ ಕಮಿಟಿಗಿದೆ. ಅದರಲ್ಲಿ 10 ಲಕ್ಷದ 87 ಸಾವಿರದ 215 ಕೇಸಸನ್ನು ದಿ: 19.9.91ರೊಳಗೆ ಫೈಲ್ ಮಾಡಿದ್ದರು. ಅದರಲ್ಲಿ ಈ ಕಮಿಟಿಯವರು 7 ಲಕ್ಷ ಪ್ರಕರಣಗಳನ್ನು ಡಿಸ್‌ಪೋಸ್ ಮಾಡಿದ್ದಾರೆ. ಇನ್ನೂ ಸುಮಾರು 3 ಲಕ್ಷ ಕೇಸಸ್ ಪೆಂಡಿಂಗ್ ಇದೆ. ಈ ಕಮಿಟಿ ಪ್ರೊಸೀಜರ್ ಬಹಳ ವಿಳಂಬವಾಗುತ್ತಿದೆ, ಆದರೆ, ಈ ಪ್ರಕರಣವೇನಿದೆ. ಈ ಕಮಿಟಿಯವರು ಫಾರಂ ನಂ 50 ಹಾಕಿದ್ದು, ಅಂಥವನ್ನು ಸ್ಥಳ ಪರಿಶೀಲನೆ ಮಾಡಿ

ಮಂಜೂರಾತಿ ಮಾಡುವ ಅಧಿಕಾರ ಸೆಕ್ಷನ್ 94(ಎ)ರಲ್ಲಿ ಕಮಿಟಿಯವರಿಗೆ ಇದೆ. ನಾವು ಏನು ಸೆಕ್ಷನ್ 94(ಬಿ)ಯನ್ನು ಇನ್‌ಸರ್ಟ್ ಮಾಡುತ್ತಿದ್ದೇವೆ, ಇದು ಯಾರು ಫಾರಂ ನಂ.50ನ್ನು ಹಾಕುವುದಕ್ಕಾಗಿಲ್ಲವೋ, ಅವರಿಗೆ ಆದಷ್ಟು ಬೇಗ ರಿಲೀಫ್ ಕೊಡುವ ಉದ್ದೇಶದಿಂದ ಸೂ-ಮೋಟೋ ಆಗಿ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡುತ್ತಾರೆ. ಇನ್ನೊಂದು ಕಡೆ ಕಮಿಟಿಯವರು ಇತ್ಯರ್ಥ ಮಾಡುವಂಥದ್ದಿದೆ. ಮಾಡಲಿ. ಈಗಾಗಲೇ ಕಮಿಟಿ ಮುಂದೆ 3 ಲಕ್ಷ ಪ್ರಕರಣಗಳು ಪೆಂಡಿಂಗ್ ಇವೆ. ಆದರೆ, ಯಾರು ಫಾರಂ ನಂ.50ನ್ನು ಹಾಕುವುದಕ್ಕೆ ಸಾಧ್ಯವಾಗಿಲ್ಲವೋ, ಅಂಥವರಿಗೆ ಡಿಲೇ ಮಾಡಬಾರದು. ತಾವೇನು 6 ತಿಂಗಳೊಳಗೆ, 1 ವರ್ಷದೊಳಗೆ ಇತ್ಯರ್ಥ ಮಾಡಬೇಕೆನ್ನುವ ಭಾವನೆ ವ್ಯಕ್ತಪಡಿಸಿದಿರಿ ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈ ಅಧಿಕಾರಿಗಳಿಗೆ ಕೊಟ್ಟು, ಯಾವ ರೀತಿ ಸರ್ಕಾರ ಇದನ್ನು ಸಕ್ರಮಗೊಳಿಸಬೇಕೆಂಬುದರ ಬಗ್ಗೆ ನಾವು ಜವಾಬ್ದಾರಿ ತೆಗೆದುಕೊಳ್ಳುತ್ತೇವೆ. ಇದರ ಉದ್ದೇಶ ಬಹಳ ಒಳ್ಳೆಯದಾಗಿದೆ. ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಬೇಕಾಗುತ್ತದೆ. ರೆಕಾರ್ಡ್ಸ್ ವೆರಿಫೈ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಎಕ್ಸ್‌ಪ್ರೆಷನ್ ಸ್ವಲ್ಪ ಮಿಸ್ಲೀಕ್ ಆಗುತ್ತದೆ. ಸೂ-ಮೋಟೋ ಎಂದರೆ, ಸ್ವಯಂಪ್ರೇರಿತರಾಗಿ ತಮ್ಮಷ್ಟಕ್ಕೆ ತಾವೇ ಜಿಲ್ಲಾಧಿಕಾರಿಗಳು ವಿಚಾರಣೆ ಪ್ರಾರಂಭ ಮಾಡಬೇಕು. ಜಿಲ್ಲಾಧಿಕಾರಿಗಳು ತಮ್ಮಷ್ಟಕ್ಕೆ ತಾವೇ ಯಾರ್ಯಾರು ಅರ್ಜಿ ಹಾಕಿಲ್ಲವೆಂದು ತಿಳಿದುಕೊಂಡು ಮಾಡಬೇಕೆನ್ನುವುದು ಯೋಚನೆಗೂ ನಿಲುಕುವುದಿಲ್ಲ. ಕಾಸ್ ಆಫ್ ಆಕ್ಷನ್ ಇರಬೇಕು. ಯಾರು ವಂಚಿತರಾಗಿರುತ್ತಾರೆ, ಅರ್ಜಿ ಕೊಟ್ಟಿಲ್ಲ ಅವರು ಕೊಡಬೇಕು. ಅವರು ಅರ್ಜಿ ಕೊಟ್ಟಮೇಲೆ, ಸೂ-ಮೋಟೋ ಆಗಿ ಜಿಲ್ಲಾಧಿಕಾರಿಯವರು ವಿಚಾರಣೆ ಮಾಡುತ್ತಾರೆ. ಅದನ್ನು ಹೇಳುವಾಗ ಸ್ವಲ್ಪ ಇದಾದರೆ ಅಷ್ಟಕ್ಕೇ ನಾವೆಲ್ಲರೂ ಗಾಬರಿಯಾದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಶ್ರೀ ಪ್ರತಾಪಚಂದ್ರಶೆಟ್ಟಿಯವರು ಮತ್ತು ಶ್ರೀ ನಾರಾಯಣರವರ ಮನಸ್ಸಿನಲ್ಲಿಯೂ ಅದೇ ಇದೆ. ಅನೇಕ ಜನ ಏನು ಸಂಶಯ ವ್ಯಕ್ತಪಡಿಸಿದರು ಎಂದರೆ ವಿಥೌಟ್ ಅಪ್ಲಿಕೇಷನ್ ಹಾಕುವುದೇನೋ ಎಂದು ತಿಳಿದುಕೊಂಡರು.

ಅಧ್ಯಕ್ಷರು : ಯಾರು ಆ ನಿಗದಿತ ತಾರೀಖಿನೊಳಗೆ ಅರ್ಜಿ ಕೊಟ್ಟಿಲ್ಲ, ಅವರು ಈಗ ಈ ಅವಕಾಶವನ್ನು ಪಡೆದುಕೊಂಡು ಅರ್ಜಿಯನ್ನು ದಾಖಲು ಮಾಡುತ್ತಾರೆ. ಅರ್ಜಿಯನ್ನು ದಾಖಲು ಮಾಡಿದ ಮೇಲೆ, ಜಿಲ್ಲಾಧಿಕಾರಿಗಳು ಸ್ವಯಂಪ್ರೇರಿತರಾಗಿ ಆ ಅರ್ಜಿಯ ವಿಚಾರಣೆಯನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಪ್ಲಿಕೇಷನ್ ಕಾಲ್- ಫಾರ್ ಮಾಡುವುದಕ್ಕೆ ರೂಲ್ಸ್ ಬೇಕಲ್ಲವೇ? ಎಷ್ಟು ದಿವಸಗಳಲ್ಲಿ ಮಾಡುತ್ತೇವೆಂಬುದನ್ನಾದರೂ ಹೇಳಬೇಕಲ್ಲವೇ? ನನ್ನ ಮನವಿ ಏನೆಂದರೆ, ಈ ಆಕ್ಟ್ ಕೆಳಗೆ ಅವರಿಗೆ ಪವರ್ಸ್ ಕೊಡುತ್ತೀರಿ. ಪವರ್ಸ್ ಕೊಟ್ಟ ಮೇಲೆ ರೂಲ್ಸ್ ಫ್ರೇಮ್ ಮಾಡಬೇಕು. ರೂಲ್ಸ್ ಫ್ರೇಂ ಮಾಡಿದ ಮೇಲೆ ನೋ ಅಬ್ಜೆಕ್ಷನ್ ಕಾಲ್-ಫಾರ್ ಮಾಡಬೇಕಲ್ಲವೇ? ಇದಕ್ಕೆ 3-4 ತಿಂಗಳಾಗುತ್ತದೆ. ಅದಾದಮೇಲೆ, ಇವರು ಒಂದು ವರ್ಷದೊಳಗೆ ಎಂದು ನಿಗದಿ

ಮಾಡುತ್ತಾರೆ. 1 ವರ್ಷದ ನಂತರ, ಸೂ-ಮೋಟೋ ಆಗಿ ಜಿಲ್ಲಾಧಿಕಾರಿಗಳು ಇನ್‌ಕ್ವಯರಿ ಮಾಡಿ ಗ್ರಾಂಟ್ ಮಾಡುತ್ತಾರೆ. ಅಂದರೆ ಎಷ್ಟು ದಿವಸಗಳಾಗುತ್ತದೆ? ಈ ಸರ್ಕಾರವಂತೂ ಆಗ ಇರುವುದಿಲ್ಲ.

ಅಧ್ಯಕ್ಷರು : ನೀವೆಲ್ಲಾ ನಿನ್ನೆಯಿಂದ ಮಾಡಿಕೊಳ್ಳುತ್ತೀರೋ ಕೆಲಸ ನೋಡಿದರೆ, ಏನೇನು ಮಾಡುತ್ತೀರೋ, ಏನೋ ಯಾರಿಗೆ ಗೊತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕನಿಷ್ಠ ನಮಗೆ ಶಭಾಷ್‌ಗಿರಿಯನ್ನಾದರೂ ಕೊಡಬೇಕು. ಹಿಂದಿನ ಸರ್ಕಾರ 10ಲಕ್ಷ ಅಪ್ಲಿಕೇಷನ್‌ಗಳಲ್ಲಿ 6 ಲಕ್ಷ ಡಿಸ್‌ಪೋಸ್ಡ್ ಆಫ್ ಮಾಡಿಸಿದೆ. ನೀವು ಇನ್ನೂ ಕಮಿಟಿ ಮಾಡುವುದರಲ್ಲೇ ಇದ್ದೀರಿ. 1992-93ರಲ್ಲಿ ಹತ್ತಿರ ಹತ್ತಿರ 3-4 ಲಕ್ಷ ಕೇಸಸನ್ನು ಡಿಸ್‌ಪೋಸ್ ಮಾಡಿವೆ. ನೀವು ಸಮಯ ನಿಗದಿ ಮಾಡಿ.

ಅಧ್ಯಕ್ಷರು : ಮಾನ್ಯ ಕಂದಾಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಮಾನ್ಯ ಪ್ರತಿಪಕ್ಷದ ನಾಯಕರು ಸೂಚಿಸಿದಂತೆ ಬಹಳ ಸಮಯ ತೆಗೆದುಕೊಂಡು ತಿದ್ದುಪಡಿ ಮಾಡಿದರೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ನೀವು ರೂಲ್ಸ್ ಫ್ರೇಂ ಇದನ್ನೆಲ್ಲಾ ಶೀಘ್ರವಾಗಿ ಮಾಡುವುದಕ್ಕೆ ಒಂದು ಸಮಯ ನಿಗದಿ ಮಾಡಿದರೆ ಒಳ್ಳೆಯದು.

ಶ್ರೀ ಬಿ. ಸೋಮಶೇಖರ್ : 1 ವರ್ಷದಲ್ಲಿ ಮಾಡಿಸುತ್ತೇನೆ. ಅದಕ್ಕಾಗಿ ಪ್ರೊಸೀಜರನ್ನು ಸಿಂಪ್ಲಿಫೈ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಪ್ರತಿವರ್ಷದ ನಾಯಕರು ಈ ಇಲಾಖೆ ಮಂತ್ರಿಗಳಾಗಿಯೂ ಕೂಡ ಕೆಲಸ ಮಾಡಿದ್ದಾರೆ. ಅವರು ಹೇಳುವುದೂ ಸಾಧುವಾದುದು. ನೀವು ರೂಲ್ಸ್ ಫ್ರೇಂ ಮಾಡಿ. ಮಾಡಿದ ಮೇಲೆ, ಅದಕ್ಕೆ ಅಬ್ಜೆಕ್ಷನ್ಸ್ ಕಾಲ್-ಫಾರ್ ಮಾಡಬೇಕು. Then you will have to finally publish the rules. ಆದಾದ ಮೇಲೆ, you are going to stipulate one year. ಅನೇಕ ಸಲ ಏನಾಗುತ್ತದೆಂದರೆ, ಆ ವರ್ಗಕ್ಕೆ ಸೇರಿರುವ, ಆ ನೋವನ್ನನುಭವಿಸಿರುವವರು ಯಾರು ಇಲ್ಲಿದ್ದಾರೆ ಅವರು ಬೇಗ ಮಾಡುತ್ತಾರೆ. ಇಲ್ಲದಿದ್ದರೆ, ಮಾಮೂಲವಾಗಿ ಮಾಡುವ ಕೆಲಸವೆಂದು ಅವರು ತಮ್ಮದೇ ಸಮಯ ತೆಗೆದುಕೊಳ್ಳುತ್ತಾರೆ. ಇವರು ಇಲ್ಲಿ ರೂಲ್ಸ್ ಫ್ರೇಂ ಮಾಡಿ, ಅಬ್ಜೆಕ್ಷನ್ಸ್ ಕಾಲ್-ಫಾರ್ ಮಾಡಿ ಫೈನಲೈಸ್ ಮಾಡುವುದಕ್ಕೆ 6 ತಿಂಗಳು ತೆಗೆದುಕೊಳ್ಳುತ್ತಾರೆ. ಆಮೇಲೆ 1 ವರ್ಷ ನಿಗದಿ ಮಾಡಿದರೆ ಏನೇನಾಗುತ್ತದೋ, ಯಾರ್ಯಾರು ಹೋಗುತ್ತಾರೋ, ಬರುತ್ತಾರೋ, ಯಾರಿಗೆ ಗೊತ್ತು? ಇಡೀ ಸದನ ಇಷ್ಟೊಂದು ಕಾತುರದಿಂದ ಈ ತಿದ್ದುಪಡಿಯನ್ನು ಸ್ವಾಗತಿಸುತ್ತಿರುವ ಸನ್ನಿವೇಶದಲ್ಲಿ ಕೆಲವು ರೂಲ್ಸ್ ಫ್ರೇಂ ಮಾಡುವುದನ್ನು 1 ತಿಂಗಳೊಳಗೆ ಫೈನಲ್ ಮಾಡಿ. It is in the interest of exploited section.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಜಾಯಿಂಟ್ ಸೆಲೆಕ್ಟ್ ಕಮಿಟಿಯವರೇ ಮಾಡಿಲ್ಲವೇ?

ಅಧ್ಯಕ್ಷರು : ಅದು ಆದಮೇಲೆ, ಅಬ್ಜೆಕ್ಷನ್ ಕಾಲ್-ಫಾರ್, 1 ವರ್ಷವೆಂದು ನಿಗದಿಪಡಿಸಿ. I think that should be fair enough ಏಕೆಂದರೆ, you also subscribe to this. Kindly reply.

ಶ್ರೀ ಜೆ.ಸಿ. ಮಾಧುಸ್ವಾಮಿ : 1 ವರ್ಷ ಅಪ್ಲಿಕೇಷನ್ ರಿಸೀವ್ ಮಾಡುವುದಕ್ಕೋ, ತೀರ್ಮಾನ ಮಾಡುವುದಕ್ಕೋ? There must be a cut-off date.

ಅಧ್ಯಕ್ಷರು : ಬೇಕು, ಬೇಕೆಂದು ಕಾಂಪ್ಲಿಕೇಟ್ ಮಾಡುತ್ತಿದ್ದೀರಿ. ನಾನು ನಿದ್ದೆ ಹೋಗಿರುವವರನ್ನು ಎಬ್ಬಿಸಬಲ್ಲೆ, ಸುಮ್ಮನೆ ಮಲಗಿದವರನ್ನು ಎಬ್ಬಿಸಲು ಆಗುವುದಿಲ್ಲ. ರೂಲ್ಸ್ ಫ್ರೇಂ ಮಾಡುವಾಗ ಅಪ್ಲಿಕೇಷನ್ಸ್ ತೆಗೆದುಕೊಳ್ಳುವುದಕ್ಕೆ ಇಷ್ಟು ದಿವಸ, ಇವೆಲ್ಲವನ್ನೂ ಅದರಲ್ಲಿ ಮೆನ್‌ಷನ್ ಮಾಡುತ್ತಾರೆ. ನನಗೆ ಗೊತ್ತಿದೆಯೋ, ಇಲ್ಲವೋ ಎಂದು ಹೇಳಿದೆ. ಹೀಗೆಲ್ಲಾ ಮಾಡಿದರೆ ಹೇಗೆ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ನಾವು ಕಮಿಟಿಯಲ್ಲಿ ಏನು ಪಾಸ್ ಮಾಡುತ್ತೇವೆ ಅದು ಪುನಃ ಎ.ಸಿ.ಯವರು ರೀ-ಅಪ್ರೋಪ್ರಿಯೇಷನ್ ಮಾಡಿದರೂ ಕೂಡ, 2ನೇ ಬಾರಿಗೆ ಕಮಿಟಿಯಲ್ಲಿಟ್ಟು ಮಾಡುವ ಕಾಂಪ್ಲಿಕೇಟೆಡ್ ಪ್ರೊಸೀಜರ್ ಆಗುತ್ತಿದೆ. ಡಿ.ಸಿ. ಆರ್ಡರ್ ಮಾಡಿದ ಮೇಲೆ, ರೀ-ಅಪ್ರೋಪ್ರಿಯೇಷನ್‌ಗೆ ಬರುವ ಸ್ಪೇಜ್ ಇಲ್ಲ. ಕಮಿಟಿಯಲ್ಲಿ ಕೊಡುವ ತೀರ್ಮಾನವೇ ಒಂದು ರೀತಿ, ಡಿಸಿಯವರು ಮಾಡುವ ತೀರ್ಮಾನವೇ ಒಂದು ರೀತಿಯಾಗುವುದು ಬೇಡ. ಇದನ್ನು ಸಿಂಪ್ಲಿಫೈ ಮಾಡಿ.

1.20 ಪಿ.ಎಂ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸದಸ್ಯರುಗಳು ನೀಡಿರತಕ್ಕಂಥ ಸೂಚನೆಗಳನ್ನು ಸಂಪೂರ್ಣವಾಗಿ ಸರ್ಕಾರ ಸ್ವೀಕಾರ ಮಾಡುತ್ತದೆ. ಆದಷ್ಟು ಬೇಗ ಈ ಸಮಸ್ಯೆಯನ್ನು ಪರಿಹರಿಸಬೇಕೆಂಬುದೇ ನಮ್ಮ ಉದ್ದೇಶ. ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಪ್ಲಾಂಟೇಷನ್ ಕ್ರಾಪ್ಸ್‌ನಲ್ಲಿ ಆಗ್ರಿಕಲ್ಚರ್ ಲೇಬರ್ಸ್, ಸ್ಮಾಲ್ ಫಾರಮರ್ಸ್, ಮಾರ್ಜಿನಲ್ ಫಾರಮರ್ಸ್ ಇವರು ಏನು ಆ ಒಂದು ವ್ಯಾಪ್ತಿಯಲ್ಲಿ ಮಾಡಿಕೊಂಡಿದ್ದಾರೆ ಅಂಥವರಿಗೆ ಮಾಡುವುದಕ್ಕೆ ಅವಕಾಶವಿದೆ. ಇದರ ಜೊತೆಗೆ ಪ್ರಿವೀಲೈಜಡ್ ಲ್ಯಾಂಡ್ ಎಂದು ನಾವೇನು ಹೇಳುತ್ತೇವೆ, ಅಂದರೆ ಕುಮುಕಿ, ಕಾಡು, ಇಂಥ ಲ್ಯಾಂಡ್‌ಗಳಲ್ಲಿ ಯಾರೂ ಒಂದು ಯೂನಿಟ್‌ಗಳಲ್ಲಿ ಮಾಡಿಕೊಂಡಿರುತ್ತಾರೋ ಅವುಗಳನ್ನು ಇದರಲ್ಲಿ ಸೇರಿಸಿದ್ದೇವೆ. ಸೌತ್ ಕೆನರಾದಲ್ಲಿ ಬಹಳ ಸಮಸ್ಯೆ ಇತ್ತು. ಅದನ್ನೂ ಕೂಡ ನಾವು ಇದರಲ್ಲಿ ಸೇರಿಸಿದ್ದೇವೆ. ಹಾಗೂ ಬೀಳು ಇರುವುದನ್ನು ರೆಸ್ಟೋರ್ ಮಾಡತಕ್ಕಂಥ ಕೆಲಸವನ್ನು ಇದರಲ್ಲಿ ಮಾಡಬೇಕೆಂದು ತಾವು ಹೇಳಿದಿರಿ, ಅದರಂತೆ ನಾವು ಆದಷ್ಟು ಶೀಘ್ರದಲ್ಲಿ ಸರಳೀಕರಣಗೊಳಿಸಿ ಅದನ್ನು ಮಾಡುತ್ತೇವೆಂದು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಮುದ್ದೇಹನುಮೇಗೌಡರು ಹೇಳಿದಂತೆ, ಈಗಿನ ಎಗ್ಜಿಸ್ಟಿಂಗ್ ಕಮಿಟೀಸ್ ಏನು ಕೆಲಸ ಮಾಡುತ್ತಿವೆ, ಅವುಗಳ ಪ್ರೊಸೀಜರ್ ಕೂಡ ಸ್ವಲ್ಪ ಸರಳೀಕರಣಗೊಳಿಸಿದರೆ process of allotting the land to the poor people would be hastened. ಅದನ್ನು ಸ್ವಲ್ಪ ತಾವು ದಯಮಾಡಿ ಮಾಡಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದರಲ್ಲಿ ಸ್ವಲ್ಪ ಸೇಂದಿ ವನವನ್ನು ಸೇರಿಸಿಬಿಡಿ.

ಅಧ್ಯಕ್ಷರು : ಪರ್ಯಾಲೋಚನೆ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ಈ ಹಂತದಲ್ಲಿ ವಿರೋಧಪಕ್ಷದ ಅನೇಕ ಸದಸ್ಯರು ಒಟ್ಟಿಗೆ ನಿಂತು ಮಾತನಾಡಲಾರಂಭಿಸಿದರು)

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಜಿಲ್ಲಾಧಿಕಾರಿಗಳಿಗೆ ಕೊಡುವುದಕ್ಕೆ ನಮ್ಮ ವಿರೋಧವಿದೆ.

ಶ್ರೀ ಹೆಚ್.ಡಿ. ಬಸವರಾಜ್ : ಡಿ.ಸಿ.ಯವರಿಗೆ ಕೊಡುವುದಾದರೆ ನಮ್ಮ ಆಕ್ಷೇಪಣೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸಮಿತಿಗೆ ಅಧಿಕಾರವನ್ನು ಕೊಡಬೇಕು, ಅದನ್ನು ಸರ್ಕಾರ ಒಪ್ಪಿಕೊಳ್ಳಬೇಕು.

ಶ್ರೀ ಹೆಚ್.ಡಿ. ಬಸವರಾಜ್ : ಡಿ.ಸಿ.ಯವರು ಎಷ್ಟು ಒತ್ತಡದಲ್ಲಿದ್ದಾರೆಂದು ತಮಗೂ ಗೊತ್ತಿರುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಜಿಲ್ಲಾಧಿಕಾರಿಗಳಿಗೆ ಕೊಡುವುದಾದರೆ ಅರ್ಥವಿಲ್ಲ, ಎಷ್ಟು ಕೆಲಸ ಒಬ್ಬ ಜಿಲ್ಲಾಧಿಕಾರಿ ಮಾಡಬೇಕು ಹೇಳಿ?

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ನಾವು ಇದನ್ನು ಸ್ವಾಗತಿಸುತ್ತೇನೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಈ ಕೆಲಸ ಜಿಲ್ಲಾಧಿಕಾರಿಗಳಿಗೆ ವಹಿಸಿದರೆ ಜಿಲ್ಲಾಧಿಕಾರಿಗಳು ಏನು ಕೆಲಸ ಮಾಡುವುದು?

ಅಧ್ಯಕ್ಷರು : ಇದು ಕರ್ನಾಟಕ ವಿಧಾನಸಭೆ, ಯಾರಾದರೊಬ್ಬರು ಎದ್ದು ನಿಂತು ಮಾತನಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಶಾಸಕರ ಭಾವನೆಗಳನ್ನು ಅರ್ಥ ಮಾಡಿಕೊಂಡು ಸರ್ಕಾರದವರು ಒಪ್ಪಿಕೊಳ್ಳಬೇಕು. ಹೀಗೆ ಅನುಮೋದನೆ ಮಾಡಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ : ನಾವು ಬೇರೆಯವರ ತರಹ ಗಲಾಟೆ ಮಾಡುವುದಿಲ್ಲ. ನೀವೇನು ಹೆದರಬೇಕಾದ ಅವಶ್ಯಕತೆ ಇಲ್ಲ.

(ಗೊಂದಲ)

ಅಧ್ಯಕ್ಷರು : ತಮ್ಮಂತಹ ಗುಣವಂತರಿರುವುದರಿಂದ ಅದು ಆಗುವುದಿಲ್ಲ ಎನ್ನುವ ನಂಬಿಕೆ ನನಗಿದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಇವರಿಗೆ ಸದಸ್ಯರ ಮೇಲೆ ನಂಬಿಕೆಯಿಲ್ಲ. ಪೂರ್ತಿ ಅಧಿಕಾರಿಗಳ ಮೇಲೆ ನಂಬಿಕೆ ಇದೆ.

ಶ್ರೀ ಡಿ.ಕೆ. ಶಿವಕುಮಾರ್ : ಜಿಲ್ಲಾಧಿಕಾರಿಗಳಿಗಿಂತಲೂ ಹೆಚ್ಚಿನ ಜವಾಬ್ದಾರಿ ನಮಗೂ ಇದೆ. ಆದಷ್ಟು ಬೇಗ ನಾವು ಮಾಡುತ್ತೇವೆ.

MR. SPEAKER : I am in the last leg. ನಾನು ತಮ್ಮೆಲ್ಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ತಿದ್ದುಪಡಿಯನ್ನು ಪಾಸು ಮಾಡಿಕೊಡೋಣ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ದಯವಿಟ್ಟು ಆ ರೀತಿ ಮಾಡಬೇಡಿ, ಡಿ.ಸಿ. ಅವರ ವ್ಯಾಪ್ತಿಗೆ ಇದನ್ನು ತರಬೇಡಿ.

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೆ, ಇದು ವಾಸ್ತಾವಿಕತೆಯೇ ತಾವೇ ಹೇಳಿ. ಜಿಲ್ಲಾಧಿಕಾರಿಗಳು ಇವತ್ತು ಎಷ್ಟು ಕೆಲಸವೆಂದು ಮಾಡುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜ್ : ಆಡಳಿತ ಪಕ್ಷದ ಸದಸ್ಯರು ಮತ್ತು ಸುಮ್ಮನೆ ಕುಳಿತಿರಬಹುದು, ಆದರೆ ಅವರ ಮನಸ್ಸಿನಲ್ಲೂ ಕೂಡ ಇದಕ್ಕೆ ವಿರೋಧವಿದೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಈಗಲೇ ತಮಗೊಂದು ಸಲಹೆ ಕೊಟ್ಟರು. ಅದು ಏನೆಂದರೆ, ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್ ಅವರನ್ನು ಅಪಾಯಿಂಟ್ ಮಾಡಿ ಅವರಿಗೆ ಡೆಲಿಗೇಟ್ ಮಾಡಿ ಎಂದು ಒಂದು ಮಾತು ಹೇಳಿದರು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಬೇಕಾದರೆ ಮತಕ್ಕೆ ಹಾಕಿ, ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಓಟಿಂಗ್ ಮಾಡಲಿ, ಇದರ ಬಗ್ಗೆ ಓಟಿಂಗ್ ಆಗಲೇಬೇಕು.

ಅಧ್ಯಕ್ಷರು : ಸ್ವಲ್ಪ ಯೋಚನೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಡೂಪ್ಲಿಕೇಷನ್ ಆಫ್ ವರ್ಕ್ ಆಗುತ್ತದೆ. ಈಗ ಆಲ್‌ರೆಡಿ ಮೂರು ಲಕ್ಷ ಅರ್ಜಿಗಳು ಪೆಂಡಿಂಗ್ ಇರತಕ್ಕಂಥದ್ದು ಅದು ಶಾಸಕರ ಸಮಿತಿಯ ಮುಂದಿದೆ. ಈಗ ಬರತಕ್ಕಂಥದ್ದು ಅದು ಸ್ಪೆಷಲ್ ಡಿಸಿ ಅವರ ಮುಂದೆ ಹೋಗುತ್ತದೆ. ಅಂದರೆ ಎರಡು ಕಮಿಟಿ ಒಂದೇ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುತ್ತವೆ. ಒಂದು ಕಡೆ ಶಾಸಕರ ಸಮಿತಿ, ಮತ್ತೊಂದು ಕಡೆ ಸ್ಪೆಷಲ್ ಡಿಸಿ ಅವರ ಸಮಿತಿ. ಅವರು ಹೇಳುವುದರಲ್ಲಿ ಅರ್ಥ ಇದೆ. ಕಮಿಟಿಯಲ್ಲಿರುವ ಎಗ್ಜಿಪ್ಟಿಂಗನ್ನು ರೆಫರ್ ಮಾಡಿ ಅದೇ ಅರ್ಜಿಗಳನ್ನು ನೀವು ಸ್ಪೆಷಲ್ ಡಿಸಿ ಅವರಿಗೆ ರೆಫರ್ ಮಾಡಿದರೆ, ಈಗ ಆಲ್ ರೆಡಿ ಮೂರು ಲಕ್ಷ ಅರ್ಜಿಗಳನ್ನು ಡಿಸ್‌ಪೋಸ್ ಮಾಡುವುದಕ್ಕೆ ಏನು ಕಮಿಟಿ ಇದೆ, ಇದೇ ಕಮಿಟಿ ಮುಂದೆ ಅದು ಬರಲಿ. ಇದರಲ್ಲಿ ಏಕೆ ವ್ಯತ್ಯಾಸ?

ಅಧ್ಯಕ್ಷರು : ಇದಕ್ಕೆ ತಾವೇನು ಹೇಳುತ್ತೀರಿ?

ಶ್ರೀ ಬಿ. ಸೋಮಶೇಖರ್ : ಆದಷ್ಟು ಬೇಗ ಇವರಿಗೆ ಖಾತಾ ಮಾಡಿ ಕೊಡಬೇಕೆಂಬುದೇ ನಮ್ಮ ನಿಮ್ಮೆಲ್ಲರ ಉದ್ದೇಶ. ನಾವು ಮಾಡುವ ರೂಲ್ಸ್‌ನಲ್ಲಿ ಸರಳೀಕರಣಗೊಳಿಸಿ, ಆದಷ್ಟು ಬೇಗ ಮಾಡಬೇಕೆಂಬುದೇ ನಮ್ಮ ನಿಮ್ಮೆಲ್ಲರ ಅಭಿಪ್ರಾಯ. ಇದನ್ನು ಮಾಡಬೇಕಾದರೆ ಆರ್‌ಟಿಸಿ, ಟಿಟಿ ಫೈನ್ ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ರೆಕಾರ್ಡ್ಸ್‌ನಲ್ಲಿ ನೋಡಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ರೆಕಾರ್ಡ್ಸ್ ನಾವು ನೋಡುತ್ತೇವೆ. ನಮಗೇನು ರೆಕಾರ್ಡ್ಸ್ ನೋಡುವುದಕ್ಕೆ ಬರುವುದಿಲ್ಲವೆಂದು ತಾವು ತಿಳಿದುಕೊಂಡಿದ್ದೀರಾ?

(ಗೊಂದಲ)

ಮಾನ್ಯ ಸದಸ್ಯರು : ಪಹಣಿ ನೋಡುವುದಕ್ಕೆ ತಹಸೀಲ್ದಾರ್ ಸಾಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ತೀರ್ಮಾನ ಜೆಡಿಎಲ್‌ಪಿ ಯಲ್ಲಿ ಆಗಿದ್ದರೆ, ನಾವು ಎಲ್ಲರೂ ಒಪ್ಪಿಕೊಳ್ಳುತ್ತವೆ. ಏಕೆಂದರೆ, ನಾವೆಲ್ಲರೂ ಎಂಎಲ್‌ಎ ಗಳು ತಾನೇ.

ಶ್ರೀ ಹೆಚ್.ಡಿ. ಬಸವರಾಜ್ : ಹಾಲಿ ಸಮಿತಿಗಳಿರುವುದರಿಂದ ಆದಷ್ಟು ಬೇಗ ಕೆಲಸವಾಗುತ್ತದೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಖರ್ಗೆಯವರು ಹೇಳಿದಂತೆ, ಆದನ್ನು ಸರಳೀಕರಣ ಬೇಗ ಮಾಡಬೇಕೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವೀಗಾಗಲೇ ತಾಲ್ಲೂಕು ಆಡಳಿತ ಮತ್ತು ಜಿಲ್ಲಾಡಳಿತವನ್ನು ಚುರುಕುಗೊಳಿಸುವಂತಹ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಸ್ಪೆಷಲ್ ಡಿ.ಸಿ. ರಿವೈವ್ ಮಾಡಬೇಕೆಂದು ನಮ್ಮ ಚಿಂತನೆ ಇದೆ. ತಾಲ್ಲೂಕು ತಹಸೀಲ್ದಾರ್ ಅವರ ಕೈಯಲ್ಲಿ ಇದನ್ನು ಇನ್‌ಸ್ಪೆಕ್ಷನ್ ಮಾಡಿಸಿ ಆದಷ್ಟು ಬೇಗ ಮಾಡುವುದಕ್ಕೆ ಅವಕಾಶವಿದೆ. ಈ ಕೆಲಸ ಮಾಡುವುದಕ್ಕೆ ಸರ್ಕಾರ ಯೋಚಿಸುತ್ತದೆ.

(ಗೊಂದಲ)

ಅಧ್ಯಕ್ಷರು : ಇದು ಬಹಳ ಗಂಭೀರವಾದ ವಿಚಾರ. ಇನ್ನೊಂದು ಸ್ವಲ್ಪ ಹೊತ್ತು ಚರ್ಚೆ ಮಾಡುವುದಕ್ಕೆ ನನ್ನದೇನೂ ತಕರಾರಿಲ್ಲ. ನಾನು ಆತುರದಲ್ಲಿ ಮತಕ್ಕೆ ಹಾಕುವುದಿಲ್ಲ. ಆದರೆ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ, ನೀವೆಲ್ಲರೂ ಒಟ್ಟಿಗೆ ಆರು ಜನ ನಿಂತುಕೊಂಡರೆ ಹೇಗೆ? ಅವರು ಏನು ಉತ್ತರ ಹೇಳುತ್ತಾರೆ? ನೀವೆಲ್ಲರೂ ಹೇಳತಕ್ಕಂಥ ಅಭಿಪ್ರಾಯಗಳನ್ನು ಕೇಳುವ ತಾಳ್ಮೆ ನನಗಿದೆ. ಇದು ಬಹಳ ಮಹತ್ವದ ವಿಚಾರವಾಗಿರುವುದರಿಂದ ನಾನು ತರಾತುರಿಯಲ್ಲಿ ಮತಕ್ಕೆ ಹಾಕುವುದಿಲ್ಲವೆಂದು ತಮಗೆ ಆಶ್ವಾಸನೆ ಕೊಡುತ್ತೇನೆ. ಆದ್ದರಿಂದ, ಈ ಮನೆಯ ಗೌರವ, ವಿಶೇಷತೆ, ಏನು ಇದೆ ಅದನ್ನು ಕಾಪಾಡಿಕೊಳ್ಳುವುದಕ್ಕೆ ತಾವೆಲ್ಲರೂ ಸಹಕರಿಸಬೇಕು.

ಶ್ರೀ ಬಿ. ಸೋಮಶೇಖರ್ : ಈಗಾಗಲೇ ನಮ್ಮ ಕಮಿಟಿಯವರು ಮೂರು ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡತಕ್ಕಂಥದ್ದು ಪೆಂಡಿಂಗ್ ಇದೆ. ದಿನಾಂಕ 19-9-91ರ ಒಳಗಡೆ ಫಾರಂ ನಂ. 50

ಹಾಕುವುದಕ್ಕೆ ಆಗಿಲ್ಲವೋ ಅಂಥವರಿಗೆ ಸ್ಪೆಷಲ್ ಡ್ರೈವ್ ಮಾಡಿ, ಪ್ರತ್ಯೇಕ ಪ್ರಕರಣಗಳಿಗೆ ಸ್ಪೆಷಲ್ ಡ್ರೈವ್ ಮಾಡಿಸಿ, ನಮ್ಮ ಅಧಿಕಾರಿಗಳ ಮುಖಾಂತರ ಸ್ಥಳ ಪರಿಶೀಲನೆ ಮಾಡಿ, ರೆಕಾರ್ಡ್ಸ್‌ಗಳನ್ನು ವೆರಿಫೈ ಮಾಡಬೇಕಾಗುತ್ತದೆ. ಏಕೆಂದರೆ, ಅವರು ಟಿಟಿ ಕಟ್ಟಿದ್ದಾರೋ, ಅಥವಾ ಫೈನ್ ಕೊಟ್ಟಿದ್ದಾರೋ, ಆರ್‌ಟಿಸಿ ಏನು ಇದೆ, ಇದನ್ನೆಲ್ಲ ಗುರುತಿಸಬೇಕಾಗುತ್ತದೆ. ಹಾಗೂ ಪರಿಶೀಲಿಸಬೇಕಾಗುತ್ತದೆ. ಮಾನ್ಯ ಖರ್ಗೆಯವರು ಹೇಳಿದ ಹಾಗೆ ಯಾವುದೇ ಸರಳೀಕರಣ ಬೇಕಾದರೂ ಮಾಡಿ, ಆದಷ್ಟು ಬೇಗ ಮಾಡಬೇಕೆಂಬುದೇ ನಮ್ಮ ಉದ್ದೇಶ.

ಅಧ್ಯಕ್ಷರು : ಭೂ ಮಂಜೂರಾತಿ ಹೊಣೆಯನ್ನು ಬಗರ್ ಹುಕುಂ ಸಕ್ರಮ ಸಮಿತಿಗಳಿಗೇ ನೀಡಬೇಕೆಂದು ಬಹುತೇಕ ಸದಸ್ಯರ ಭಾವನೆಯಾಗಿದೆ ಮತ್ತು ಆಡಳಿತ ಪಕ್ಷದ ಕೆಲವು ಸದಸ್ಯರೂ ಕೂಡ ತಮ್ಮ ಅಭಿಪ್ರಾಯವನ್ನು ನನ್ನ ಬಳಿ ವ್ಯಕ್ತಪಡಿಸಿದ್ದಾರೆ. ಇವರುಗಳೆಲ್ಲರ ಅನಿಸಿಕೆ ಏನೆಂದರೆ, ಈ ಸಮಿತಿಗಳು ಕೆಲಸ ಮಾಡುವ ವೇಳೆಗೆ ಯಾವುದೇ ಒಂದು ಚೂರು ಜಮೀನನ್ನು ಕೂಡ ಮಂಜೂರು ಮಾಡಬೇಕಾದರೂ ಕೂಡ ತಾಲ್ಲೂಕು ಕಛೇರಿಯಲ್ಲಿ ಕುಳಿತು ಮಾಡುತ್ತಿಲ್ಲ, ಸ್ಥಳಕ್ಕೆ ಹೋಗಿ ತನಿಖೆ ಮಾಡಿ ಪರಿಶೀಲನೆ ಮಾಡಿ, ವಿಚಾರ ಮಾಡಿ ಮಾಡುತ್ತಿದ್ದಾರೆ. ಈ ಕೆಲಸ ಈಗಾಗಲೇ ಮಾಡುತ್ತಿದ್ದೇವೆ. ಆದರೆ ಶಾಸಕರು, ಅಧ್ಯಕ್ಷರಾಗಿರುತ್ತಾರೆ ಮತ್ತು ಖಾಸಗಿ ಸದಸ್ಯರಾಗಿರುತ್ತಾರೆ. ಅಲ್ಲಿ ನಮ್ಮ ಮೇಲೆ ಇಲ್ಲದೇ ಇರತಕ್ಕಂಥ ವಿಶ್ವಾಸ, ನಂಬಿಕೆ ಆ ಅಧಿಕಾರಿಗಳ ಮೇಲೆ ಏಕೆ ಬರಬೇಕು? ನಮ್ಮಲ್ಲಿಯೇ ಆ ವಿಶ್ವಸವನ್ನು ಇಡಿ. ನಾವು ಆ ಕೆಲಸವನ್ನು ನಿಷ್ಠೆಯಿಂದ ಮಾಡಿತ್ತೇವೆ. ಎನ್ನತಕ್ಕಂಥದ್ದು ಸದಸ್ಯರ ಕಳಕಳಿ ಆಗಿದೆ. ಬಹುಶಃ ಇವರೆಲ್ಲರೂ ಒತ್ತಾಯ ಪೂರ್ವಕವಾಗಿ ನಿಮ್ಮ ಹೇಳಿಕೆಗೆ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ವಿಷಯವನ್ನು ಸರ್ಕಾರ ಪರಿಶೀಲನೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಕೆಲವು ನತದೃಷ್ಟ ಜನರು ಅರ್ಜಿಗಳನ್ನು ಹಾಕಿಲ್ಲ ಮತ್ತು ಅವರಿಗೆ ಅರ್ಜಿ ಹಾಕಬೇಕೆಂಬ ತಿಳುವಳಿಕೆಯೂ ಕೂಡ ಇರುವುದಿಲ್ಲ. ಈಗ ತಂದಿರುವ ತಿದ್ದುಪಡಿಗೆ ಎರಡು ಪಾರ್ಟಿಯವರಿಗೂ ಸಹ ಇದರ ಬಗ್ಗೆ ಸಹಮತ ಇಲ್ಲವೆಂದು ಒತ್ತಾಯ ಮಾಡುತ್ತಿದ್ದಾರೆ. ಮೂರು ವರ್ಷದ ಹಿಂದೆ ಸಮಗ್ರವಾಗಿರತಕ್ಕಂಥ ಮಸೂದೆಯನ್ನು ತಂದು ಅದರ ತೀರ್ಮಾನ ಏನಾಗಿದೆ ಎಂದರೆ, perhaps they have committed to give an opportunity to those persons who could not give their applications in time. ಶಾಸಕರು ತಾಲ್ಲೂಕುಗಳಲ್ಲಿ ಜನರ ಮಧ್ಯೆ ಕೆಲಸ ಮಾಡುವುದಕ್ಕೂ ಅನುಕೂಲವಾಗುತ್ತದೆ. ಆದರೆ ಇದನ್ನು ಜಿಲ್ಲಾಧಿಕಾರಿಗಳು ಅಥವಾ ವಿಶೇಷ ಜಿಲ್ಲಾಧಿಕಾರಿಗಳಿಗೆ ಕೊಟ್ಟರೆ ಬಹಳ ತಡವಾಗುವ ಸಂದರ್ಭಗಳು ಜಾಸ್ತಿ ಇರುತ್ತದೆ.

SRI B. SOMASHEKAR : If we allow them to file application, there will be flood gate in the entire state and we will not be able to dispose of all the cases and help the rural deserving people. ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ಪರವಾಗಿ ಆಶ್ವಾಸನೆ ಕೊಡುವುದೇನೆಂದರೆ, ಈ ಸಮಿತಿ ಫರ್‌ಫಾರ್ಮೆನ್ಸ್ ನೋಡಿಕೊಂಡು ಮತ್ತು ಸಮಿತಿಯು

ತೆಗೆದುಕೊಳ್ಳುವ ತೀರ್ಮಾನದ ಸಾಧಕಭಾದಕಗಳನ್ನು ಗಣನೆಗೆ ತೆಗೆದುಕೊಂಡು ಯಾವುದು ಯೋಗ್ಯವಾಗಿರುತ್ತದೆ ಅದನ್ನು ಮಾಡೋಣ. ಆದ್ದರಿಂದ ಈ ಚರ್ಚೆಯನ್ನು ಸೋಮವಾರ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯ ಅಂಗೀಕಾರದ ಹಂತದಲ್ಲಿ ಸದನದ ಬಹಳಷ್ಟು ಸದಸ್ಯರು ಈ ತಿದ್ದುಪಡಿಯಲ್ಲಿ ಜಿಲ್ಲಾಧಿಕಾರಿಗಳ ಬದಲು ಸಮಿತಿಗೆ ಆ ಹಕ್ಕನ್ನು ಕೊಡಬೇಕೆಂದು ತಮ್ಮ ವಾದವನ್ನು ಹೇಳಿದ್ದಾರೆ. ಈ ಸಮಿತಿ 1991ನೇ ಇಸವಿಯಲ್ಲಿ ರಚನೆಯಾಗಿದೆ. ಈಗಲೂ ಅಲ್ಲಿ ಸುಮಾರು ಮೂರು ಲಕ್ಷ ಅರ್ಜಿಗಳು ಸಮಿತಿಯ ಮುಂದೆ ಪೆಂಡಿಂಗ್ ಇದೆ. ಮೊದಲಿನಿಂದಲೂ ಸಾಗುವಳಿ ಮಾಡುತ್ತಿದ್ದವರು ಬಗರ್ ಹುಕುಂ ಭೂಮಿ ಮಂಜೂರಾತಿಗೆ ಫಾರಂ ಸಂಖ್ಯೆ 50 ರಲ್ಲಿ ಅರ್ಜಿ ಸಲ್ಲಿಸಿ 1991 ಸೆಪ್ಟೆಂಬರ್ ಒಳಗೆ ಮಂಜೂರಾತಿ ಪಡೆಯಬೇಕಾಗಿತ್ತು. ಅನೇಕರು ಈ ಅವಕಾಶವನ್ನು ಉಪಯೋಗಿಸಿಕೊಳ್ಳದೆ ಇರುವುದರಿಂದ ಈ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಇದರ ಉಪಯೋಗವನ್ನು ಬಹಳಷ್ಟು ರೈತರು ಪಡೆದುಕೊಂಡು ವ್ಯವಸಾಯ ಮಾಡುವುದಕ್ಕೆ ಸಹಾಯವಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಸಮಿತಿಯ ಹೇಳಿಕೆಯನ್ನು ಪರಿಶೀಲನೆ ಮಾಡಿ ಸೋಮವಾರ ಮತ್ತೆ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಕೊಡುತ್ತಿರುವ ಹೇಳಿಕೆ ಸರಿಯಾಗಿಲ್ಲ. ಅರ್ಜಿ ಯಾರು ಹಾಕಿಲ್ಲ. ಅವರ ಜೀವನಕ್ಕೆ ಏನು ಮಾಡುವುದು? ಅವರಿಗೆ ಅರ್ಜಿ ಕೊಡುವುದಕ್ಕೂ ಸಹ ತಿಳಿದಿರುವುದಿಲ್ಲ ಮತ್ತು ಅವರಿಗೆ ಯಾರು ಬರೆದುಕೊಡಬೇಕು? ಅವರಿಗೆ ತಿಳುವಳಿಕೆ ಕೊಡುವವರು ಯಾರು? ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಅಧಿಕಾರ ವಹಿಸಿಕೊಟ್ಟರೆ ಅವರು ಅಲ್ಲಿಗೆ ಹೋಗಿ ಕೇಳುವುದಕ್ಕೆ ಸಹ ಕೆಲವರಿಗೆ ಗೊತ್ತಾಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಇದನ್ನು ಆದಷ್ಟು ಬೇಗ ಸರಳೀಕರಣಗೊಳಿಸಿ ಮಾಡಬೇಕೆಂದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಇದರಲ್ಲಿ ಕೆಲವರು ಆರ್.ಟಿ.ಸಿ., ಫೈನ್ ಕೊಟ್ಟಿದ್ದಾರೋ, ಇಲ್ಲವೋ ಎಂಬುದನ್ನು ರೆಕಾರ್ಡ್ಸ್‌ನಲ್ಲಿ ನೋಡಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಸೆಕೆಂಡ್ ಸ್ಟೇಜ್ ಬಗ್ಗೆ ಮಾತನಾಡುತ್ತಿದ್ದೀರಿ, ತಾವು ಫಸ್ಟ್ ಸ್ಟೇಜ್ ಬಗ್ಗೆ ಹೇಳಿ.

ಶ್ರೀ ಬಿ. ಸೋಮಶೇಖರ್ : ಫಾರಂ ನಂಬರ್ 50 ರಲ್ಲಿ ಏನು ಇದೆ ಎಂಬುದನ್ನು ಪರಿಶೀಲನೆ ಮಾಡಿ, ಅದರ ಆಧಾರದಮೇಲೆ ನಮ್ಮ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿದ ಮೇಲೆ...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಅರ್ಥವಿಲ್ಲದ್ದು.

ಶ್ರೀ ಬಿ. ಸೋಮಶೇಖರ್ : ಇಂಥ ಪ್ರಕರಣಗಳನ್ನು ಸ್ಪೆಷಲ್ ಡ್ರೈವ್ ಮಾಡಿ ಈಗಾಗಲೇ, ಅದರಲ್ಲಿ ಸುಮಾರು 10 ಲಕ್ಷದ 87 ಸಾವಿರದ 215 ಕೇಸನ್ನು 19.9.1991ರೊಳಗೆ ಫೈಲ್ ಮಾಡಿದ್ದರು. ಅದರಲ್ಲಿ ಈ ಕಮಿಟಿಯವರು 7 ಲಕ್ಷ ಪ್ರಕರಣಗಳನ್ನು ಡಿಸ್‌ಪೋಸ್ ಮಾಡಿದ್ದಾರೆ. ಇನ್ನೂ ಸುಮಾರು 3 ಲಕ್ಷ ಅರ್ಜಿಗಳು ಪೆಂಡಿಂಗ್ ಇವೆ. ಇದರಿಂದ ಈ ಕಮಿಟಿಯ ಪ್ರೊಸೀಜರ್ ಪ್ರಕಾರ ಬಹಳ ವಿಳಂಬವಾಗುತ್ತಿದೆ. ಇದರಿಂದ ಎಷ್ಟೋ ಅರ್ಜಿಗಳು ಸಮಿತಿಯ ಮುಂದೆ ಹಾಗೆ ಉಳಿದಿವೆ. ಯಾರು ಸಮಿತಿಗೆ ಅರ್ಜಿಗಳನ್ನು ಹಾಕಿರುತ್ತಾರೆ ಅಂಥವರಿಗೆ ಸ್ಪೆಷಲ್ ಡ್ರೈವ್ ಮಾಡಿ ಆದಷ್ಟುಬೇಗ ಈ ಕೆಲಸವನ್ನು ಮುಗಿಸುತ್ತೇವೆ.

(ಗೊಂದಲ)

ಅಧ್ಯಕ್ಷರು : ತಾವು ಆಗಲೇ ಹೇಳಿರುವುದನ್ನೇ ಹೇಳುತ್ತಿದ್ದೀರಿ. ಅದರಲ್ಲಿ ಕೆಲವು ಪದಗಳು ತಪ್ಪು ಅರ್ಥವನ್ನು ಸೂಚಿಸುತ್ತವೆ.

(ಗೊಂದಲ)

ಶ್ರೀ ಎನ್.ಎಂ. ನಬಿ : ಮಾನ್ಯ ಅಧ್ಯಕ್ಷರೆ, ನಾನು ಯಾವತ್ತೂ ಹೆಚ್ಚಿಗೆ ಮಾತನಾಡಿಲ್ಲ. ಆದರೆ ನಾನು ತಮ್ಮ ಗಮನಕ್ಕೆ ತಿಳಿಸುವುದೇನೆಂದರೆ ನನ್ನ ಕ್ಷೇತ್ರದಲ್ಲಿ ಸುಮಾರು 50-60 ಈ ರೀತಿಯ ಕೇಸಸ್ ಇರಬಹುದು. ಆದರೆ, ಬಹಳಷ್ಟು ಜನ ಇಲ್ಲಿಯತನಕ ಅರ್ಜಿಗಳನ್ನು ಕೊಡುವುದಕ್ಕೆ ಯಾರೂ ಪ್ರಯತ್ನವನ್ನು ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಸರ್ಕಾರ ಸಮಿತಿಯನ್ನು ರಚನೆ ಮಾಡಿದೆ. ಆದರೆ ಇಲ್ಲಿ ಜಿಲ್ಲಾಧಿಕಾರಿಗಳು, ಯಾರು ಫಾರಂ ನಂಬರ್ 50 ಹಾಕಿರುತ್ತಾರೆ ಅದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಮಂಜೂರಾತಿ ಮಾಡುವ ಅಧಿಕಾರವನ್ನು ಇವರಿಗೆ ಕೊಡುತ್ತೀರಿ. ಆದರೆ, ಅವರು ಸ್ಥಳದಲ್ಲಿ ಇದ್ದಾರೋ ಅಥವಾ ಲ್ಯಾಂಡ್ ಇದೆಯೋ ಅಥವಾ ಇಲ್ಲವೋ, ಒಟ್ಟಿನಲ್ಲಿ ಅಲ್ಲಿರತಕ್ಕಂಥ ರೆಕಾರ್ಡ್‌ಗಳ ಮೇಲೆ ಸಮಿತಿ ಮಂಜೂರಾತಿ ಕೊಟ್ಟು ಅವರಿಂದ ಹಣ ತುಂಬಿಸಿಕೊಂಡು ಸಾಗುವಳಿ ಚೀಟಿಯನ್ನು ಕೊಡುತ್ತಿದ್ದಾರೆ. ಸಾಗುವಳಿ ಚೀಟಿ ಆ ಜಮೀನಿಗೆ ಸಂಬಂಧಪಟ್ಟ ತೆರಿಗೆ ಕಟ್ಟಿಸಿಕೊಂಡು ನಂತರ ಅದು ಖಾತೆ ಆಗಿ ಅವರ ಹೆಸರಿನಲ್ಲಿ ಆಗುತ್ತದೆ, ಇದೇ ಪ್ರೊಸೀಜರ್. ಬಿಲೆಟೆಡ್ ಅಪ್ಲಿಕೇಷನ್ ಯಾರು ಕೊಡುತ್ತಾರೆ ಅವರಿಗೆ ಅವಕಾಶ ಮಾಡಿಕೊಡುತ್ತಾರೆ. ಹೊಸದಾಗಿ ಪ್ರೊಸೀಜರ್ ಬರುವುದಿಲ್ಲ. ಸ್ಪೆಷಲ್ ಡ್ರೈವ್ ಮಾಡಿದರೂ ಕೂಡ ಅದು ಅಷ್ಟೇ.

ಕನ್ಸಿಡರೇಷನ್‌ಗೆ ಬರುತ್ತದೆ, ಏಕೆಂದರೆ ಸರಿಯಾದ ಸಮಯಕ್ಕೆ ಅರ್ಜಿಗಳು ಬಂದಿಲ್ಲ. ಡಿಲೇ ಆಗಿರುವುದರಿಂದ ಆ ಒಂದು ಕನ್ಸಿಡರೇಷನ್ ತೆಗೆದುಕೊಳ್ಳುತ್ತೀರಾ? ಇವರು ಕೇಳತಕ್ಕಂಥದ್ದು ನಾವು ಮಾಡುತ್ತಿದ್ದೇವೆ ನಮಗೂ ಇದನ್ನು ಕೊಡಿ ಎಂದು ಸದಸ್ಯರು ಕೇಳುತ್ತಿದ್ದಾರೆ. ಇದು ಒಂದು ಜೀವನ ಬದುಕಿನ ಸಮಸ್ಯೆಯ ವಿಚಾರ. ಅಧಿಕಾರಿಗಳಿಗೆ ಈ ಜವಾಬ್ದಾರಿಯನ್ನು ಕೊಡಬೇಡಿ ನಾವು ಸಾರ್ವಜನಿಕರ ಸಮಸ್ಯೆಗಳನ್ನು ಶ್ರದ್ಧೆಯಿಂದ, ಅವರ ಅಹವಾಲುಗಳನ್ನು ಸ್ವೀಕರಿಸಿ ಕೆಲಸ ಮಾಡುತ್ತೇವೆ ಆ ಕೆಲಸವನ್ನು ಕೊಡಿ ಎಂದು ಸದಸ್ಯರು ಕೇಳುತ್ತಿದ್ದಾರೆ. ದಯಮಾಡಿ ಉಪ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಫೇವರೆಬಲ್ ರಿಪ್ಲೈ ಕೊಡಿ. ತಾವು ತಮ್ಮ ಸಭಾನಾಯಕರೊಂದಿಗೆ ಮತ್ತು ಪಕ್ಷದವರ ಜೊತೆಗೆ ಚರ್ಚೆ ಮಾಡಿ ಇದನ್ನು ಸೋಮವಾರ ಚರ್ಚೆಗೆ ತೆಗೆದುಕೊಳ್ಳುವುದಾದರೆ ನನ್ನ ಆಕ್ಷೇಪಣೆ ಇಲ್ಲ. ಈಗ ನಾವು ಬಿಲ್‌ಪಾಸ್ ಮಾಡೋಣವೇ ಹೇಗೆ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಸಮಿತಿಯವರು ಏನು ಮಾಡುತ್ತಿದ್ದಾರೆ ಅವರು ಅದನ್ನೇ ಮಾಡುತ್ತಿದ್ದಾರೆ. ಆದರೆ ಸ್ಪೆಷಲ್ ಡ್ರೈವ್ ಏನು ಮಾಡಿದ್ದಾರೆ...

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಏಕೆ ಆ ಅಧಿಕಾರಿಗಳಿಗೆ ಹಿಂಸೆ ಕೊಡುತ್ತೀರಿ. ಜಿಲ್ಲಾಧಿಕಾರಿಗಳಿಗೆ ಅದನ್ನು ಕೊಟ್ಟರೆ ನಿಮ್ಮ ಉದ್ದೇಶ ಈಡೇರುತ್ತದೆಯೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಲ್ಲವನ್ನೂ ಸರ್ಕಾರ ಪರಿಶೀಲನೆ ಮಾಡಿ, ಸೋಮವಾರ ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ನಾನು ಇದನ್ನು ವೋಟಿಂಗ್‌ಗೆ ಹಾಕುವುದಿಲ್ಲ, ಇದನ್ನು ಲಾಸ್ಟ್ ಸ್ಟೇಜ್‌ನಲ್ಲಿ ಇಡುತ್ತೇನೆ.

(ಗೊಂದಲ)

ಮಾನ್ಯ ಉಪ ಮುಖ್ಯಮಂತ್ರಿಗಳು ನಗುತ್ತಾ ಇರುವುದನ್ನು ನೋಡಿದರೆ ಬಹುಶಃ ಅವರು ತಮ್ಮ ಬೇಡಿಕೆಯನ್ನು ಈಡೇರಿಸಬಹುದೆಂದು ನನಗೆ ಅನಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಇವರ ಅಭಿಪ್ರಾಯದ ಮೇಲೆ ಗಂಭೀರವಾಗಿ ವಿಚಾರ ಮಾಡಿ ನೋಡೋಣ. ತಾವು ಹೇಗೆ ಹೇಳುತ್ತೀರಿ?

ಅಧ್ಯಕ್ಷರು : ತಾವು ನಗುತ್ತಿರುವುದನ್ನು ನೋಡಿದರೆ ನನಗೆ ಒಂದು ಅಂದಾಜು ಬಂತು.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಕ್ಷೇತ್ರದಲ್ಲೇ ಇವೆ, ನೀವು ಸಮಂಜಸವಾದ ಉತ್ತರವನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ : ತಮಗೆ ಹೇಳುತ್ತೇನೆ, ನೀವು ಯಾವ ರೀತಿಯಾಗಿ ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪ ಮುಖ್ಯಮಂತ್ರಿಗಳು ಮಾರವಾಡಿ ಇದ್ದಂತೆ.

ಶ್ರೀ ಸಿದ್ಧರಾಮಯ್ಯ : ಸರ್ಕಾರದ ಅಭಿಪ್ರಾಯ ಇಟ್ಟುಕೊಂಡು, ಸದಸ್ಯರು ಏನು ಹೇಳುತ್ತಾರೆ, ಯಾವುದು ಸುಲಭವಾಗುತ್ತದೆ, ಅದನ್ನು ಮಾಡುತ್ತೇವೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸೋಮವಾರ ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ನಾನು ಎಲ್ಲಾ ಸದಸ್ಯರಲ್ಲಿ ಸಹಕಾರವನ್ನು ಬಯಸುತ್ತೇನೆ. ಎರಡನೇ ಶನಿವಾರ ಇದ್ದರೂ ನಾವು ಇವತ್ತು ಕಲಾಪವನ್ನು ನಡೆಸುತ್ತಿದ್ದೇವೆ. ಅರ್ಧಗಂಟೆಯಲ್ಲಿ ಊಟವನ್ನು ಮಾಡಿಕೊಂಡು ಬರಬೇಕಾಗುತ್ತದೆ. ಯಾರು ಊರಿಗೆ ಹೋಗದೆ, ಗೈರು ಹಾಜರಾಗಿ ಉಳಿಯದೆ ಚರ್ಚೆ ಮಾಡಿ ರಿಪ್ಲೈ ಇವತ್ತು ಕೊಡಿಸಿಬಿಡೋಣ. ಯಾರು ಸದಸ್ಯರು ಇಲ್ಲದೇ ಹೋದರೆ ಕೆಲಸ ಮಾಡಿದಂತಾಗುವುದಿಲ್ಲ. ಸಾಯಂಕಾಲ 6-7 ಗಂಟೆಯಾದರೂ ಪರವಾ ಇಲ್ಲ, ಕಲಾಪವನ್ನು ಬೇಕಾದರೆ ಮುಂದುವರಿಸೋಣ. ಇನ್ನೂ ಚರ್ಚೆಯಾಗಬೇಕೆಂದರೆ, ಹೆಚ್ಚಿಗೆ ಸಮಯ ಕುಳಿತುಕೊಳ್ಳೋಣ. ಎಲ್ಲ ಸದಸ್ಯರಲ್ಲಿ ಮತ್ತೊಮ್ಮೆ ವಿನಂತಿಕೊಳ್ಳುತ್ತೇನೆ. ನಾನು ಎಲ್ಲರನ್ನು ಗಮನಿಸಿದ್ದು, ಇವತ್ತು, ಒಂದು ದಿವಸಕ್ಕೆ ನೀವು ಡಿಮಾಂಡ್ಸ್ ಪಾಸ್ ಮಾಡುವುದಕ್ಕಾದರೂ ಬರಬೇಕು. ಡಿಮಾಂಡ್ಸ್ ನನ್ನ ಮನೆಗೆ ಕೊಡುತ್ತೀರಾ? ಇದಕ್ಕೆ ಎರಡನೇ ಅಭಿಪ್ರಾಯ ಇಲ್ಲ. ತಾವು ಎಲ್ಲರೂ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸದಸ್ಯರು ಬರದಿದ್ದರೆ ನೀವು ಏನು ಮಾಡುತ್ತೀರಿ. ನಿಮ್ಮ ತೀರ್ಪು ಸರಿಯಾಗಿ ಇದೆ.

ಅಧ್ಯಕ್ಷರು : ಯಾರು ಸದಸ್ಯರು ಈಗ ಇದ್ದಾರೆ ಅವರನ್ನು ನಾನು ಗಮನಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಎಷ್ಟೋ ಸಲ ಸದಸ್ಯರು ಸರಿಯಾಗಿ ಬಂದಿಲ್ಲವೆಂದು ಹೇಳುತ್ತೇನೆ. ಎರಡು ಕಡೆ ಸೇರಿ 5 ಜನ ಸದಸ್ಯರು ಆದರೆ ನಮ್ಮ ಪರಿಸ್ಥಿತಿ ಏನು? ನಾನು ಮತ್ತು ಖರ್ಗೆಯವರು ಇರುತ್ತೇವೆ.

ಅಧ್ಯಕ್ಷರು : ನನಗೆ ಎಲ್ಲ ಸದಸ್ಯರ ಬಗ್ಗೆ ವಿಶ್ವಾಸ ಇದೆ. ಯಾರು ಗೈರು ಹಾಜರಿ ಉಳಿಯಬಾರದು. ಈಗ ಸಭೆಯಲ್ಲಿ ಮುಂದೂಡಿ ಮತ್ತೆ 2-45ಕ್ಕೆ ಸಮಾವೇಶಗೊಳ್ಳೋಣ.

(ಸದನವು ಮಧ್ಯಾಹ್ನ 1-45ಕ್ಕೆ ಮುಕ್ತಾಯಗೊಂಡು ಪುನಃ 2-45ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸಭೆಯು ಪುನಃ 3-10 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಉಪಾಧ್ಯಕ್ಷರು : ಶ್ರೀ ಜೆ.ಸಿ. ಮಾಧುಸ್ವಾಮಿಯವರೇ, ತಾವು ಪ್ರಾರಂಭ ಮಾಡಿ. ಈಗ ಬೇಡಿಕೆಗಳ ಮೇಲೆ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ : ಈಗ ಶೂನ್ಯವೇಳೆ.....

ಉಪಾಧ್ಯಕ್ಷರು : ಶೂನ್ಯವೇಳೆ ಈಗ ಇಲ್ಲ. ಬೇಡಿಕೆಗಳ ಮೇಲೆ ಚರ್ಚೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ತಮ್ಮಲ್ಲಿ ಮನವಿ ಮಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ. ನಮ್ಮದೂ ಸ್ವಲ್ಪ ಕೇಳಿ ಸ್ವಾಮಿ. ಈಗ ಶೂನ್ಯವೇಳೆ ಬಗ್ಗೆ ನಾವು ಮಾನ್ಯ ಅಧ್ಯಕ್ಷರ ಹತ್ತಿರ ಬೆಳಿಗ್ಗೆ ಮಾತನಾಡಿದ್ದೆವು. ಅಧ್ಯಕ್ಷರು ಏನು ಹೇಳಿದರು ಎಂದರೆ, ಈಗ ಮಧ್ಯಾಹ್ನ ಸಭೆ ಪ್ರಾರಂಭವಾಗುತ್ತದೆ. ಬೇಡಿಕೆಗೆ ಮುಂಚೆ ಇದನ್ನು ತೆಗೆದುಕೊಳ್ಳೋಣ, ಎಲ್ಲರೂ ಎರಡೆರಡು ನಿಮಿಷ ಮಾತನಾಡಿ ಮುಗಿಸೋಣ ಎಂದು ಹೇಳಿದರು. ಇದು ಒಂದು. ಎರಡನೆಯದು ಏನೆಂದು ಹೇಳಿದರೆ ಇವತ್ತು ಶನಿವಾರ ಸಭೆಯನ್ನು ನಡೆಸಿದ್ದೀರಿ. ನನ್ನದೇನೂ ಅಭ್ಯಂತರ ಇಲ್ಲ. ಅನೇಕ ಜನ ಊರುಗಳಿಗೆ ಹೋಗಬೇಕಾಗಿದೆ, ಅನೇಕ ವಿಚಾರಗಳು ಇವೆ. ಆದ್ದರಿಂದ ತಾವು ಸಭೆಯನ್ನು ಅಡ್ಜರ್ನ್‌ಮಾಡಿ ಮುಂದಕ್ಕೆ ಹಾಕಬಹುದಾಗಿತ್ತು. ಆದರೂ ತಾವೇನು ತೀರ್ಮಾನ ತೆಗೆದುಕೊಂಡಿದ್ದೀರಿ, ಅದಕ್ಕೆ ನಾವು ಬದ್ಧರಾಗಿದ್ದೇವೆ. ನಮ್ಮದೇನೂ ಇದರಲ್ಲಿ ತರಕಾರು ಇಲ್ಲ. ರಾತ್ರಿ ಏಳು ಗಂಟೆ ಅಲ್ಲ, ಎಂಟು ಗಂಟೆಯವರೆಗೆ ನಾವು ಕೂತಿರುತ್ತೇವೆ. ಆದರೆ, ಇಲ್ಲಿ ಉತ್ಸಾಹದ ವಾತಾವರಣ ಇಲ್ಲ. ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾದರೆ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ ಮತ್ತು ನಾಲ್ಕೈದು ಜನ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಅನೇಕರು ಊರುಗಳಿಗೆ ಹೋಗಬೇಕಾಗಿರುತ್ತದೆ. ನಾಳೆ ಭಾನುವಾರವಾದ್ದರಿಂದ ಅನೇಕ ವ್ಯವಸ್ಥೆಗಳೂ, ಸಮಾರಂಭಗಳೂ ಇರುತ್ತವೆ. ಈ ಮಾತನ್ನು ನಾನು ಏಕೆ ಹೇಳುತ್ತೇನೆಂದರೆ, ತಾವು ಈ ಸಾರಿ ಊರಿಗೆ ಹೋಗುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಪ್ರಶ್ನೆ ಬೇರೆ. ಆದರೆ, ನಾವಂತೂ ಪ್ರತಿ ವಾರ ಹೋಗಬೇಕು. ಪ್ರತಿ ಶನಿವಾರ ನಾನಂತೂ ಕ್ಷೇತ್ರಕ್ಕೆ ಹೋಗಬೇಕು. ಕ್ಷೇತ್ರದಲ್ಲಿ ಏನು ಎಂಬುದನ್ನು ನೋಡಬೇಕು. ಇಲ್ಲಿ ಎಷ್ಟು ಜನ ಮಂತ್ರಿಗಳು ಹೋಗುತ್ತೀರೋ ನನಗೆ ಗೊತ್ತಿಲ್ಲ. ನಾನಂತು ಹೋಗುತ್ತೇನೆ. ಆದ್ದರಿಂದ, ತಾವು ಶೂನ್ಯವೇಳೆಯಲ್ಲಿ ಒಂದೊಂದು ನಿಮಿಷ ಕೆಲವು ವಿಚಾರಗಳನ್ನು ಕೇಳುವುದಕ್ಕೆ ಅವಕಾಶ ಕೊಟ್ಟುಬಿಡಿ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೇ, ಶೂನ್ಯವೇಳೆಯಲ್ಲಿ ಎಲ್ಲರಿಗೂ ಒಂದೊಂದು ನಿಮಿಷ ಅಥವಾ ಎರಡೆರಡು ನಿಮಿಷ ಅವಕಾಶ ಕೊಡಬೇಕು. ಏಕೆಂದರೆ, ಪ್ರಮುಖವಾದಂಥ ವಿಚಾರಗಳು ಇವೆ.

ಉಪಾಧ್ಯಕ್ಷರು : ಇಲ್ಲ. ದಯಮಾಡಿ ತಾವು ಕೇಳಿ, ತಾವು ಕೂಡಿ.

ಶ್ರೀ ಸಿ. ಬೈರೇಗೌಡ : ಶೂನ್ಯವೇಳೆಯನ್ನು ತೆಗೆದುಕೊಳ್ಳುವುದು ಅಥವಾ ಬಿಡುವುದು ತಮ್ಮ ವಿವೇಚನೆಗೆ ಬಿಟ್ಟಿರತಕ್ಕ ವಿಚಾರ. ಇವತ್ತು ಬೇಡಿಕೆ ಮೇಲೆ ಮಾತನಾಡತಕ್ಕ ಸದಸ್ಯರು ಯಾರಿದ್ದಾರೆ, ಅವರು ಚರ್ಚೆಯಲ್ಲಿ ಭಾಗವಹಿಸಲಿ. ಸೋಮವಾರ ನಾವು ಉತ್ತರ ಕೊಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಎಲ್ಲಾ ಒಂದೇಸಾರಿ ಆಗಬೇಕೆಂದರೆ ಕಷ್ಟವಿದೆ. ಆದ್ದರಿಂದ, ಮಾನ್ಯ ಸದಸ್ಯರು ಯಾರು ಯಾರು ಭಾಗವಹಿಸುತ್ತಾರೋ ಅವರು ಚರ್ಚೆಯಲ್ಲಿ ಭಾಗವಹಿಸಲಿ. ಶೂನ್ಯ ವೇಳೆ ವಿಚಾರದಲ್ಲಿ ತಾವು ತೀರ್ಮಾನ ತೆಗೆದುಕೊಳ್ಳಬೇಕು, ಅದು ತಮಗೆ ಬಿಟ್ಟಿರತ್ಕಂಥಾದ್ದು. ನಮಗೆ

ಸೋಮವಾರ ಬೆಳಿಗ್ಗೆ 9 ಅಥವಾ 10 ಗಂಟೆಗೆ ಉತ್ತರ ಕೊಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಆಯಿತು. ಈಗಾಗಲೇ ಮಧ್ಯಾಹ್ನದೊಳಗಾಗಿ ಅಧ್ಯಕ್ಷರು ತಿಳಿಸಿದ ಪ್ರಕಾರ ಈಗ ವಿಧೇಯಕದ ಮೇಲೆ ಚರ್ಚೆ ಪ್ರಾರಂಭ ಮಾಡೋಣ. ಮಾಧುಸ್ವಾಮಿಯವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರು ಮೂರು ದಿವಸದಿಂದ ಇಲ್ಲ, ನಿಂತು ಹೋಗಿದೆ. ಚಾಮರಾಜನಗರ ಕ್ಷೇತ್ರದಲ್ಲಿ ಮೂರು ದಿವಸದಿಂದ ಕುಡಿಯುವ ನೀರಿಲ್ಲ. ಇದನ್ನು ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡು, ಬಹಳ ತೊಂದರೆಯಾಗಿದೆ ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು : ಅವರು ಈಗ ಪ್ರಾರಂಭ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅನೇಕಬಾರಿ ಸರ್ಕಾರಕ್ಕೆ ಹೇಳಿಯಾಯಿತು. 300 ಕೊಳವೆ ಬಾವಿಗಳು ಕೆಟ್ಟಿವೆ, ನೀರಿಲ್ಲ, ಬಹಳ ತೊಂದರೆ ಇದೆ, ವಿದ್ಯುಚ್ಛಕ್ತಿ ಇಲ್ಲ. ಇದೇನು ಸ್ವಾಮಿ, ನಾವು ಶಾಸನ ಸಭೆಯಲ್ಲಿ ಕುಳಿತಿದ್ದೇವೆ. ಈ ಪರಿಸ್ಥಿತಿ ಇರುವಾಗ ನಾವು ಕ್ಷೇತ್ರಕ್ಕೆ ಹೋಗುವ ಹಾಗೆ ಇಲ್ಲ. ತಾವು ಸ್ವಲ್ಪ ಅವಕಾಶ ಕೊಟ್ಟರೆ ಕೇಳುತ್ತೇನೆ, ಸರ್ಕಾರ ಏನು ಉತ್ತರ ಕೊಡುತ್ತದೋ ಅದನ್ನು ಹೇಳಲಿ. ಆದ್ದರಿಂದ, ದಯವಿಟ್ಟು ಅವಕಾಶ ಕೊಡಬೇಕು. ಏಕೆಂದರೆ, ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿದೆ.

ಉಪಾಧ್ಯಕ್ಷರು : ತಮಗೆ ಅವಕಾಶ ಅನಂತರ ಕೊಡೋಣ. ಈಗ ಅವರನ್ನು ಕರೆದಿದ್ದೇನೆ, ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ತೀರ್ಪನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ, ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ, ವಿದ್ಯುಚ್ಛಕ್ತಿ ಇಲ್ಲ.

ಉಪಾಧ್ಯಕ್ಷರು : ಉತ್ತರ ಹೇಳಬೇಕಾದರೆ, ಇಲ್ಲಿ ಆರ್. ಡಿ.ಪಿ.ಆರ್.ಮಂತ್ರಿಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕ್ಷೇತ್ರ ಒಂದೇ ಅಲ್ಲ. ಇಡೀ ರಾಜ್ಯದ ಪರಿಸ್ಥಿತಿ ಇದೇ ಆಗಿರುತ್ತದೆ. ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸುವುದಕ್ಕೆ ಇವರ ಕೈಲಿ ಆಗಲಿಲ್ಲ. ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾವು ಸುಮ್ಮನೆ ಇಲ್ಲಿ ಶಾಸನ ಸಭೆಯಲ್ಲಿ ಕುಳಿತಿದ್ದೇವೆ. ಮೂರು ದಿವಸಕ್ಕೊಂದು ಸಾರಿ ನೀರು ಕುಡಿಯುವುದು ಎಂದರೆ, ಇದೇನು ಪರಿಸ್ಥಿತಿ. ಇದನ್ನು ಸರ್ಕಾರಕ್ಕೆ ಎಷ್ಟು ಸಾರಿ ಹೇಳಿದ್ದೇವೆ. ನಾವು ಅನೇಕಬಾರಿ ಸರ್ಕಾರಕ್ಕೆ ಹೇಳಿದ್ದೇವೆ.

ಉಪಾಧ್ಯಕ್ಷರು : ಈ ರೀತಿ ನೀವೊಬ್ಬರೇ ಮಾತನಾಡಿದರೆ ಹೇಗೆ? ನೀವು ಪ್ರಶ್ನೆ ಕೇಳಿದರೆ, ಅದಕ್ಕೆ ಇಲ್ಲಿ ಉತ್ತರ ಹೇಳುವವರೂ ಬೇಕು. ಆರ್.ಡಿ.ಪಿ.ಆರ್.ಮಂತ್ರಿಗಳು ಇಲ್ಲ. ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ. ಅವರು ಬಂದಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಆರ್.ಡಿ.ಪಿ.ಆರ್. ಮಂತ್ರಿಗಳು ಸದನದಲ್ಲಿ ಬಂದರೆ, ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಬರುವವರೆಗೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಅಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತರು)

ಉಪಾಧ್ಯಕ್ಷರು : ನೀವು ಹಿರಿಯ ಸದಸ್ಯರು, ಈ ರೀತಿ ಮಾಡಿದರೆ ಹೇಗೆ? ನಾನೇನು ಹೇಳಿದ್ದೇನೆ, ದಯಮಾಡಿ ತಾವು ಅರ್ಥಮಾಡಿಕೊಳ್ಳಿ. ಅವರು ಈಗ ಪ್ರಾರಂಭ ಮಾಡಲಿ, ಆರ್.ಡಿ.ಪಿ.ಆರ್ ಮಿನಿಸ್ಟರು ಬಂದರೆ ತಮಗೆ ಅವಕಾಶ ಮಾಡಿಕೊಡುತ್ತೇನೆ, ಆಗ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಹಿರಿಯ ಸದಸ್ಯರ ಗತಿಯೇ ಹೀಗಾದರೆ, ಮಿಕ್ಕವರ ಗತಿ ಏನು?

ಉಪಾಧ್ಯಕ್ಷರು : ನಮಗೆ ಎಲ್ಲರೂ ಒಂದೇ. ಆಮೇಲೆ ತೆಗೆದುಕೊಳ್ಳೋಣ. ಈಗ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಕುಡಿಯುವ ನೀರಿನ ತೊಂದರೆ ಬಗ್ಗೆ ನಿಜವಾಗಿಯೂ ಮೂರನೇ ಸಲ ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಹಿರಿಯ ಸದಸ್ಯರು. ಆಮೇಲೆ ಪದೇ ಪದೇ ಪ್ರಸ್ತಾಪ ಮಾಡಿ, ಯಾರು ಸರ್ಕಾರದ ಮೇಲೆ ಬಹಳ ಪರಿಣಾಮ ಬೀರತಕ್ಕ ವ್ಯಕ್ತಿ ಇದ್ದಾರೆ, ಮುಖಂಡರು ಇದ್ದಾರೆ ಅವರ ಗತಿಯೇ ಹೀಗಾದರೆ ಬೇರೆ ಶಾಸಕರ ಗತಿ ಏನು ಎನ್ನತಕ್ಕ ಪರಿಸ್ಥಿತಿ ಬಂದಿದೆ. ಅವರು ಪರಿಣಾಮಕಾರಿಯಾಗಿ ಮಾತನಾಡುತ್ತಾರೆ ಮತ್ತು ಅಲ್ಲಿರತಕ್ಕ ಕುಂದುಕೊರತೆ ಬಗ್ಗೆ ಹೇಳುತ್ತಾರೆ. ಅನೇಕಸಾರಿ ಆಶ್ವಾಸನೆ ಕೊಟ್ಟಿದ್ದಾರೆ. ಇಲ್ಲಿ ಪ್ರಕಾಶ್‌ರವರೂ ಕೂಡ ಹೇಳಿದರು. ಈ ಸಾರಿ ಮಾಡುತ್ತೇನೆ, ತಾವು ಎದ್ದೇಳಿ ಎಂದು ಕೈಜೋಡಿಸಿ ಕೇಳಿಕೊಂಡರು. ಆಗ, ಅವರು ಧರಣಿ ಮುಕ್ತಾಯ ಮಾಡಿ ಬಂದರು. ಪುನಃ ಈಗ ಅದೇ ಪರಿಸ್ಥಿತಿ ಬಂದರೆ ಹೇಗೆ.

ಉಪಾಧ್ಯಕ್ಷರು : ಆರ್.ಡಿ.ಪಿ.ಆರ್. ಮಂತ್ರಿಗಳು ಬರಲಿ, ಅವರಿಗೆ ಅವಕಾಶ ಕೊಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಫ್ಲೋರ್ ಲೀಡರ್ ಇರುವುದರಿಂದ, ಅನೇಕಸಾರಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ಎಷ್ಟೋ ಜನ ಶಾಸಕರಿಗೆ ಪ್ರಸ್ತಾಪ ಮಾಡುವುದಕ್ಕೂ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ, ಕೊನೆಪಕ್ಷ ಇದರ ಬಗ್ಗೆ ಅವರು ಏನಾದರೂ ಯೋಚನೆ ಮಾಡಬೇಕಲ್ಲ.

ಉಪಾಧ್ಯಕ್ಷರು : ಆರ್.ಡಿ.ಪಿ.ಆರ್ ಮಂತ್ರಿಗಳು 9-5-98ರಂದು ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿರುವ ಕಾರಣದಿಂದ, ಅಧಿವೇಶನದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಮತ್ತು ನನ್ನ ಗೈರು ಹಾಜರಿಗಾಗಿ ದಯವಿಟ್ಟು ಅನುಮತಿ ಕೊಡಬೇಕೆಂದು ತಮ್ಮನ್ನು ಕೋರುತ್ತೇನೆಂದು ಪತ್ರ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಅನುಮತಿಯ ಪತ್ರವನ್ನು ಸದನದಲ್ಲಿ ಹಾಕಿ, ಸದನ ಅನುಮತಿ ಕೊಡುವುದಿಲ್ಲ. ಅವರು ಸದನದ ಒಪೀನಿಯನ್ ಪಡೆಯಬೇಕು.

ಉಪಾಧ್ಯಕ್ಷರು : ಅವರು ಹೋಗುವುದಕ್ಕೆ ಈಗಾಗಲೇ ಅಧ್ಯಕ್ಷರು ಪರವಾನೆ ಕೊಟ್ಟಿದ್ದಾರೆ. ತಾವು ದಯಮಾಡಿ ಸಹಕಾರ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕೊಟ್ಟರೆ ಅಡ್ಡಿ ಇಲ್ಲ. ಆದರೆ, ನಾನು ಹೇಳುತ್ತೇನೆ. ಸದನ ನಡೆಯುವಾಗ, ನಾವೇಕೆ ಸೇರುತ್ತೇವೆ. ನಾವೆಲ್ಲರೂ ಕೂಡ ನಮ್ಮ ವಿಷಯಗಳನ್ನು ಪ್ರಸ್ತಾಪ ಮಾಡಬೇಕು, ಸರ್ಕಾರದ ಗಮನಕ್ಕೆ ತರಬೇಕೆಂಬ ದೃಷ್ಟಿಯಿಂದಲೇ ನಾವು ಸೇರುತ್ತೇವೆ. ಆದರೆ, ಮಂತ್ರಿಗಳೇ ಇಲ್ಲವೆಂದರೆ ಎಲ್ಲರೂ ಒಬ್ಬರಿಗೊಬ್ಬರು ಬಿಟ್ಟುಹೋದರೆ ಮತ್ತೆ ಅಧಿವೇಶನ ಸೇರುವುದು ಏಕೆ? ನಾವು ಯಾರಿಗೆ ಹೇಳುವುದು, ಕುಡಿಯುವ ನೀರಿನ ಬವಣೆ ಬಂದಿದೆ. ಇದು ಅವರಿಗೆ ಸೇರುತ್ತದೆ, ಜಿಲ್ಲಾ ಪರಿಷತ್ ಅವರಲ್ಲಿದೆ, ಪಬ್ಲಿಕ್ ಹೆಲ್ತ್ ಅವರಲ್ಲಿದೆ.

ಉಪಾಧ್ಯಕ್ಷರು : ಅವರು ಅಧ್ಯಕ್ಷರಿಗೆ ಪತ್ರ ಕೊಟ್ಟು ಪರ್ಮಿಷನ್ ತೆಗೆದುಕೊಂಡಿದ್ದಾರೆ. ಈಗ ದಯಮಾಡಿ, ಸಮಯವನ್ನು ವ್ಯರ್ಥ ಮಾಡಿ, ಹಾಳು ಮಾಡುವುದು ಬೇಡ. ತಮಗೆ ನಾನು ಹೇಳಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಆದಷ್ಟು ಅವಾಯ್ಡ್ ಮಾಡಿ. ದಯವಿಟ್ಟು ಇನ್ನುಮೇಲೆ ಸದನ ಇದ್ದಾಗ, ಟೂರ್ ಮೇಲೆ ಹೋಗುವುದನ್ನು ತಪ್ಪಿಸಬೇಕು. ಏನೋ ಒಂದು ಇನ್ನೆವಿಟಬಲ್ ಕಾರ್ಯಕ್ರಮ, ಡೆಲ್ಲಿಯಲ್ಲಿ ಮೀಟಿಂಗ್ ಇದೆ, ಇಂತಾದ್ದು ಬಂದರೆ ಒಪ್ಪಬಹುದು. ಆದರೆ, ಇದು ಟೂರ್ ಪ್ರೋಗ್ರಾಂ ಹಾಕಿಕೊಂಡು ಹೋಗುತ್ತಾರೆ, ಅವರಿಗೆ ವಿನಾಯಿತಿ ಎಂದರೆ, ಬಾಕಿಯವರಿಗೇನೂ ಕೆಲಸವಿಲ್ಲವೇ?

ಉಪಾಧ್ಯಕ್ಷರು : ಆರ್.ಡಿ.ಪಿ.ಆರ್. ಮಂತ್ರಿಗಳು ಇಲ್ಲ, ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಬೆಳಿಗ್ಗೆ ಅಧ್ಯಕ್ಷರು ನಮಗೆ ಅನುಮತಿ ಕೊಟ್ಟಿದ್ದರು. ಬೇಡಿಕೆಗಳ ಮೇಲಿನ ಚರ್ಚೆಗೆ ಮುಂಚೆ, ಶೂನ್ಯವೇಳೆಗೆ ಪರ್ಮಿಷನ್ ಕೊಡುತ್ತೇನೆ ಎಂದು ಹೇಳಿದ್ದರು. ಕೊನೇಪಕ್ಷ ನಾವು ಪ್ರಸ್ತಾಪ ಮಾಡುವುದಕ್ಕೆ ಬಿಡಿ. ಇಲ್ಲಿ 13 ಜನ ಸಚಿವರು ಕುಳಿತಿದ್ದಾರೆ, ತಾವೇನು ಶೂನ್ಯವೇಳೆಯಲ್ಲಿ ಪ್ರಶ್ನೆ ಕೇಳುವುದಿಲ್ಲ. ಇನ್ನುಳಿದಿರುವವರಿಗೆ 2-2 ನಿಮಿಷ ಅವಕಾಶ ಕೊಡಿ, ಪ್ರಶ್ನೆ ಕೇಳಿ ಮುಗಿಸಿಬಿಡುತ್ತೇವೆ. ಬೆಳಿಗ್ಗೆ ಶೂನ್ಯವೇಳೆಗೆ ಅವಕಾಶ ಕೊಡುತ್ತೇನೆಂದು ಹೇಳಿಯೇ ಇವತ್ತಿನ ಬಿಸಿನೆಸ್ ಪ್ರಾರಂಭ ಮಾಡಿದ್ದು. ಆದ್ದರಿಂದ, ದಯವಿಟ್ಟು ಒಬ್ಬೊಬ್ಬರಿಗೆ 2-2 ನಿಮಿಷ ಅವಕಾಶ ಕೊಡಿ, ಬೇಗ ಮುಗಿಸಿಬಿಡುತ್ತೇವೆ.

ಉಪಾಧ್ಯಕ್ಷರು : 2 ನಿಮಿಷದಲ್ಲಿ ಅವರು ಮುಗಿಸಲಿಲ್ಲವೆಂದು ಹೇಳಿದರೆ ಏನು ಮಾಡುವುದು? ಏಕೆಂದರೆ, ನೀವು ಜವಾಬ್ದಾರಿ ತೆಗೆದುಕೊಳ್ಳುವಹಾಗಿದ್ದಾರೆ ಹೇಳಿ. ನಿಮ್ಮ ಸದಸ್ಯರ ಬಗ್ಗೆ ನೀವು ಜವಾಬ್ದಾರಿ ತೆಗೆದುಕೊಳ್ಳುವಹಾಗಿದ್ದರೆ ಹೇಳಿ?

ಶ್ರೀ ಎಸ್. ಸುರೇಶ್ ಕುಮಾರ್ : ಹಿರಿಯ ಸದಸ್ಯರ ಜವಾಬ್ದಾರಿ ನಾನು ತೆಗೆದುಕೊಳ್ಳುವುದಿಲ್ಲ.

ಉಪಾಧ್ಯಕ್ಷರು : ತಾವು ಉಪನಾಯಕರಿದ್ದೀರಿ, ನಿಮ್ಮ ಸದಸ್ಯರ ಜವಾಬ್ದಾರಿ ತೆಗೆದುಕೊಳ್ಳಿ, ನಾನು ಬೆಲ್ ಹೊಡೆದ ಕೂಡಲೇ ಅವರು ನಿಲ್ಲಿಸಬೇಕು. ಅದು ಎಲ್ಲಿಗೆ ನಿಂತಿರುತ್ತದೋ, ಅಲ್ಲಿಗೇ

ನಿಲ್ಲಬೇಕು. ತಾವು ಬಹಳಷ್ಟು ಮಹತ್ವದ ವಿಷಯಗಳು ಇವೆಯೆಂದ ಮೇಲೆ, ನಾನು ಅವಕಾಶ ಮಾಡಿ ಕೊಡುತ್ತೇನೆ. ದಯಮಾಡಿ ನಾನು 2 ನಿಮಿಷಕ್ಕೆ ಬೆಲ್ ಹೊಡೆಯುತ್ತೇನೆ, ತಾವೂ ಅಲ್ಲಿಗೆ ಮುಗಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳುವುದಕ್ಕೆ ಒಪ್ಪಿಕೊಳ್ಳುತ್ತೇನೆ. ಆದರೂ ಹಿರಿಯ ಸದಸ್ಯರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ನಡೆಯಬೇಕಲ್ಲವೇ.

ಉಪಾಧ್ಯಕ್ಷರು : ತಾವು ಉಪನಾಯಕರಿದ್ದೀರಿ, ತಮ್ಮ ಮಾರ್ಗದರ್ಶನ ಅವರಿಗೆ ಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗೆಯೇ ವಾಟಾಳ್ ನಾಗರಾಜ್‌ರವರ ಮಾರ್ಗದರ್ಶನವೂ ಬೇಕು.

ಉಪಾಧ್ಯಕ್ಷರು : ಈಗ ಮಾನ್ಯ ವಾಟಾಳ್ ನಾಗರಾಜ್ ಅವರೇ, ತಾವು ಪ್ರಸ್ತಾಪ ಮಾಡಿ, ಸರ್ಕಾರದಿಂದ ಉತ್ತರಕೊಡಿಸುತ್ತೇನೆ. 2 ನಿಮಿಷದಲ್ಲಿ ತಾವು ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ ನನಗೆ ತಮ್ಮ ಮನ ನೋಯಿಸಬೇಕೆನ್ನುವ ಇಚ್ಛೆ ಇಲ್ಲ.

ಉಪಾಧ್ಯಕ್ಷರು : ನನಗೂ ತಮ್ಮ ಮನ ನೋಯಿಸಬೇಕೆನ್ನುವ ಇಚ್ಛೆ ಇಲ್ಲ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಚಾಮರಾಜನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾನು ಚಾಮರಾಜನಗರ ತಾಲ್ಲೂಕು ಚಾಮರಾಜನಗರ ಕ್ಷೇತ್ರದ ಬಗ್ಗೆ ಒಂದು ಸಾರಿ ಅಲ್ಲ, ನಾಲ್ಕೈದು ಸಾರಿ ಇಲ್ಲಿ ಹೇಳಿದ್ದೇನೆ. ಅಲ್ಲಿ ಕನಿಷ್ಠ ಒಂದು ಕ್ಷೇತ್ರದಲ್ಲಿ 300 ಕೊಳವೆ ಬಾವಿಗಳು ಕೆಟ್ಟಿವೆ. ಭೀಕರವಾದ ಬಿಸಿಲು ಬೇಗೆ ತಡೆಯುವುದಕ್ಕೆ ಆಗುತ್ತಿಲ್ಲ. ಅದು ಬಹಳ ಹಿಂದುಳಿದ ಮತ್ತು ಗಡಿಪ್ರದೇಶ. ನೀರು ತೀರಾ ತಳಕ್ಕೆ ಹೊರಟು ಹೋಗಿದೆ. ಈ ಬಗ್ಗೆ ಕನಿಷ್ಠ ರಿಪೇರಿ ಮಾಡಿಸಿಕೊಡಿ ಎಂದು ಹೇಳಿ ನಾಲ್ಕಾರು ಬಾರಿ ಹೇಳಿದ್ದು ಆಯಿತು. ಸರ್ಕಾರ ಈ ಸದನದಲ್ಲಿ ನನಗೆ ಒಂದು ಭರವಸೆಯನ್ನು ಸಹ ಕೊಟ್ಟರು. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ನನಗೆ ಒಂದು ಭರವಸೆಯನ್ನು ಕೊಟ್ಟರು ನಾನು ಈ ಕೂಡಲೇ ಅಧಿಕಾರಿಗಳ ಒಂದು ತಂಡವನ್ನು ಅಲ್ಲಿಗೆ ಕಳುಹಿಸುತ್ತೇನೆ. ಒಂದು ವರದಿಯನ್ನು ತರಿಸಿಕೊಳ್ಳುತ್ತೇನೆ. ಆ ವರದಿ ಬಂದ ತಕ್ಷಣ ನಾನು ಈ ಬಗ್ಗೆ ತೀವ್ರವಾದ ಗಮನವನ್ನು ಕೊಡುತ್ತೇನೆಂದು. ನಾನು ಈ ಬಗ್ಗೆ ನಾಲ್ಕಾರು ಬಾರಿ ಕೇಳಿದರೂ ಇದುವರೆಗೂ ಅವರ ಗಮನ ಕೊಡಲಿಲ್ಲ. ಒಂದು ಕಡೆ ಅಲ್ಲಿ ಕುಡಿಯುವ ನೀರಿನ ಅಭಾವ ಪರಿಸ್ಥಿತಿ ನಿರ್ಮಾಣ ಆಗಿದೆ. ಒಂದು ಕಡೆ ಬೇಸಿಗೆ ಬೇಗೆ. ಒಂದು ಕಡೆ ಮಳೆ ಇಲ್ಲ. ಒಂದು ಕಡೆ ಸುವರ್ಣಾವತಿ ನದಿ ಒಣಗುತ್ತಿದೆ. ಆ ಗಡಿಪ್ರದೇಶದಲ್ಲಿ ವಿದ್ಯುಚ್ಛಕ್ತಿ ಪರಿಸ್ಥಿತಿ ಹದೆಗೆಟ್ಟಿದೆ. ಆ ಜನರ ಕಣ್ಣೀರಿನ ಕಥೆಯನ್ನು